ಬ್ರಾಂಚಾಫೀಸು
ಚಿಕ್ಕಪೇಟೆ ಬೆಂಗಳೂರು ಸಿಟಿ.

WANTED.

Wanted Candidates for Telegraph and Si Master's Classes. Full particulars and Railway Certificate on 2 annas stamp.

Apply to:—
Imperial Telegraph College
Nai Sarak,

TO LET

Printed and published by P. R. Ramaiya at Sri Rama Press, D. Subbiah Road, Mysc

ಬೆಂಗಳೂರು ಸೆಂಟ್ರಲ್ ಕೋ-ಆಪರೇಟಿವ್ ಬ್ಯಾಂಕ್, ಲಿಮಿಟೆಡ್.

ನೆಕ್ಯೂಲರ್.

(Advt.)

ಈ ಬ್ಯಾಂಕು ಸ್ಥಾಪಿಸಲ್ಪಟ್ಟು ಈಗ್ಗೆ ೭೦ ವರ್ಷ ಆಯಿತು. ಅದರ ನಾನಾ ಸದಸ್ಯರುಗಳಲ್ಲಿ ಸಾಲವು ಅವಶ್ಯವಾದಷ್ಟಿಗೂ ಮತ್ತು ಮೈಸೂರು ಸಂಸ್ಥಾನದಲ್ಲಿ ಇರುವ ಪರಸ್ಪರ ಸಹಾಯ ಸಂಘಗಳಿಗೂ ಸಹ ಉಪಯೋಗಕರವಾದ ಕೆಲಸಗಳಿಗೆ ಸಾಲವನ್ನು ಕೊಡುವ ಉದ್ದೇಶದಿಂದ ಈ ಬ್ಯಾಂಕು ಸ್ಥಾಪಿಸಲ್ಪಟ್ಟಿರುತ್ತದೆ. ಬ್ಯಾಂಕಿನ ಆಡಳಿತವು ೧೧ ಮಂದಿ ಡೈರೆಕ್ಟರುಗಳು ಒಂದು ಬೋರ್ಡಿನ ಅಧಿಕಾರಕ್ಕೆ ಒಳಪಟ್ಟಿರುತ್ತದೆ. ಡೈರೆಕ್ಟರುಗಳ ಪೈಕಿ ೭ ಮಂದಿಗಳು ಸರ್ಕಾರದ ಪಾಲಿದ್ದಿರುವುದಲ್ಲದೆ ಸರ್ಕಾರದ ಫೈನಾನ್ಸ್ ಖಾತೆ ಉದ್ಯೋಗಸ್ಥರಲ್ಲಿ ಈಗ ಇರತಕ್ಕವರು. ಉಳಿದ ಒಬ್ಬರು ಎಮ್ಮಿಗನೂರು ಮಂತ್ರಾಲೋಚನಾ ಸಭೆಯ ಮೆಂಬರಾಗಿರತಕ್ಕ ರಾಜಮಂತ್ರಪ್ರವೀಣ, ರಿವಾ ಬಹದ್ದೂರ್ ಸಿ. ಶ್ರೀನಿವಾಸಯ್ಯಂಗಾರವರು ಈ ಬ್ಯಾಂಕಿಗೆ ಮೊದಲಿನ ಪ್ರೆಸಿಡೆಂಟರಾಗಿದ್ದರು. ಮೈಸೂರು ಸರ್ಕಾರದ ಮೆಂಟ್ ಕಮಿಷನರ್ ರಾಜಕಾರ್ಯ ಪ್ರಸಕ್ತ, ರಿವ ಬಹದ್ದೂರ್ ಬಿ॥ ಡಿ. ಶಾಮರಾಯರು ಮೈಸೂರು ಪ್ರೆಸಿಡೆಂಟರಾಗಿದ್ದರು. ಮೈಸೂರು ಮಂತ್ರಾಲೋಚನಾ ಸಭೆಯ ಮೆಂಬರಾಗಿದ್ದ ರಾಜಸಹಾಧುರೀಣ, ರಿವಾ ಬಹದ್ದೂರ್ ಸರ್ ಕೆ. ಪಿ. ಪುಟ್ಟಣ್ಣ ಶೆಟ್ಟರವರು ಈಗ ಪ್ರೆಸಿಡೆಂಟರು ಆಗಿದ್ದಾರೆ. ಮೈಸೂರು ಮಂತ್ರಾಲೋಚನಾ ಸಭೆಯ ಮೆಂಬರಾಗಿದ್ದ ಮೆ॥ ಕೆ. ಎ. ಶ್ರೀನಿವಾಸಯ್ಯಂಗಾರ್ಯರವರು ವೈಸ್-ಪ್ರೆಸಿಡೆಂಟರು ಆಗಿದ್ದಾರೆ. ಇದುವರೆಗೆ ಈ ಬ್ಯಾಂಕಿನಿಂದ ಪರಸ್ಪರ ಸಹಾಯ ಸಂಘಗಳಿಗೆ ೧೪ ಲಕ್ಷ ರೂಪಾಯಿ ಹೆಚ್ಚು ಸಾಲವನ್ನು ಕೊಟ್ಟಿರುತ್ತದೆ. ಅಲ್ಲದೆ ಬ್ಯಾಂಕಿನ ಷೇರುದಾರರಾಗಿರುವ ಮೆಂಬರುಗಳಿಗೆ ೩೪ ಲಕ್ಷ ರೂಪಾಯಿಗಳಿಗಿಂತಲೂ ಹೆಚ್ಚಾಗಿಯೇ ಸಾಲವನ್ನು ಕೊಡಲಾಗಿದೆ. ಪರಸ್ಪರ ಸಹಾಯ ಸಂಘಗಳ ಮುಖಾಂತರ ಸಾಲವನ್ನು ಕೊಡುವುದಕ್ಕಿಂತಲೂ ಬ್ಯಾಂಕಿನ ಮೆಂಬರ್ ಗಳಲ್ಲಿಯೇ ನೇರವಾಗಿ ಸಾಲವನ್ನು ಕೊಡುವುದು ಅವಶ್ಯವಾಗಿಯೂ ಯುಕ್ತವಾಗಿಯೂ ಇರುವಂತೆ ಕೆಲವು ಸಂದರ್ಭಗಳ ದೆಶೆಯಿಂದ ತೋರಿಬಂದಿದೆ. ಆದಕಾರಣ ಇನ್ನು ಮುಂದೆ ಬ್ಯಾಂಕಿನ ಲೇವಾದೇವಿಯನ್ನು ಪರಸ್ಪರ ಸಹಾಯ ಸಂಘಗಳಲ್ಲಿ ಸಡಿಸುವುದಕ್ಕಿಂತಲೂ ಬೆಚ್ಚಾಗಿ ಮೆಂಬರುಗಳಲ್ಲಿಯೇ ಶೇಷವಾಗಿ ನಡೆಸಬೇಕೆಂಬುದಾಗಿ ತೀರ್ಮಾನಿಸಲ್ಪಟ್ಟಿ

ಮೈಸೂರು ಸಂಸ್ಥಾನದಲ್ಲಿ ಬ್ಯಾಂಕಿನ ಷೇರುದಾ ಸ್ವವೃತ್ತಿವ್ಯವಹಾಯವನ್ನು ಅಭಿವೃದ್ಧಿಗೊಳಿಸುವುದಕ್ಕೂ, ತರ ಪ್ರಯೋಜನಕರವಾದ ಉದ್ದೇಶಗಳನ್ನು ನೆರವೇ ಸಿಕೊಳ್ಳುವುದಕ್ಕೂ ಈ ಬ್ಯಾಂಕಿನಿಂದ ದೃಢ್ಯ ಸೌಲಭ್ಯವನ್ನು ಕೊಡುವುದಕ್ಕಾಗಿ ಕೊಡಬಹುದಾದ ದರಾಸ್ತುಗಳನ್ನು ಅಂಗೀಕರಿಸಲು ಬ್ಯಾಂಕಿನವರು ಸಿದ್ಧರಾಗಿರುತ್ತಾರೆ. ಆದರೆ ಎಲ್ಲೇ ಆಗತಕ್ಕ ಷೇರುಗಳಿದ್ದ ಕ್ಷಕ್ಕೆ ಕೆಲವು ಪತ್ರುಗಳ ಮೇಲೆ ಹೀಗೆ ದಃಖಾ ಸ್ತುಗಳು ಅಂಗೀಕರಿಸಲ್ಪಡುತ್ತವೆ. ಈ ಪರತ್ತುಗಳು ಯಾವುವೆಂದರೆ :—

1. ದರಖಾಸ್ತುದಾರರು ಮೈಸೂರು ಸೀಮೆಯಲ್ಲಿ ವಾಸ ಮಾಡುತ್ತಿರಬೇಕು. ಮತ್ತು ಮೈಸೂರು ದೇಶದಲ್ಲಿ ತಂಟೆ ತಕರಾರುಗಳಿಗೆ ಅವಕಾಶವಿಲ್ಲದಿರುವಂಥಾ ಭೂಸ್ಥಿತಿಗತಿಯನ್ನು ಉಳ್ಳವನೂ ಆಗಿರಬೇಕು.

2. ದರಖಾಸ್ತುದಾರರು ಮಿತಿಯುಳ್ಳ ಜವಾಬ್ದಾರಿಯುಳ್ಳ ಪರಸ್ಪರ ಸಹಾಯ ಸಂಘಗಳಲ್ಲಿ ಸೇರುದಾರರು ಆಗಿದ್ದರೆ ಇರತಕ್ಕವರಾಗಿರಬೇಕು. ಇವರು ಅಪೇಕ್ಷಿಸುವ ಸಾಲದ ಮೊಬಲಗು ೨,೦೦೦ ರೂಪಾಯಿಗಳಿಗೆ ತಡೆಯದೆ ಇರದೆ ಇರಬೇಕು.

3. ದರಖಾಸ್ತುದಾರರು ಅಪೇಕ್ಷಿಸುವ ಸಾಲಕ್ಕೆ ದೀಡುಮಾಡುವ ಸ್ವತ್ತುಗಳು ಫ್ರೀಹ್ಹಾಲ್ಡ್, ಕೋರ್ಟ್ ಅಟ್ಯಾಚ್‌ಮೆಂಟ್ ಡಿಕ್ರಿ ಅಥವಾ ಇತರ ಯಾವ ನಿಷೇಧವಾದ ಜವಾಬ್ದಾರಿಗಾಗಲಿ ಗುರಿಯಾಗದೆ ಇರತಕ್ಕವುಗಳಾಗಿರಬೇಕು. ಒಂದು ವೇಳೆ ಹಾಗೆ ಗುರಿಯಾಗಿದ್ದ ಸಂದರ್ಭದಲ್ಲಿ ಅಂಥಾ ಜವಾಬ್ದಾರಿಯನ್ನು ಸ್ಪಷ್ಟವಾಗಿ ತೀರಿಸಬೇಕು.

4. ಸಾಲಕ್ಕೆ ದೀಡುಮಾಡುವ ಸ್ವತ್ತುಗಳು ಕನಿಷ್ಟವಪಕ್ಷ ಸಾಲದ ಮೊಬಲಿಗೆ ಎರಡರಷ್ಟಾದರೂ ಬೆಲೆ ಬಾಳತಕ್ಕವುಗಳಾಗಿರಬೇಕು. ಈ ರೀತಿ ನಿರ್ಣಯಿಸತಕ್ಕ ಬೆಲೆಯು ಸರ್-ರಿಜಿಸ್ಟ್ರಾರರ ಆಫೀಸಿನ ರಿಜಿಸ್ಟ್ರಿಗಳಲ್ಲಿ ನಮೂದಿಸಿರುವ ಪರಭಾರೆ ಮಾಡಲ್ಪಟ್ಟ ಆಯಾಯ ಸ್ಥಳದಲ್ಲಿರುವ ಇದೇ ತರವೆ ಸ್ವತ್ತುಗಳಿಗೆ ಸಂಬಂಧಪಟ್ಟ ದಾಖಲೆಗಳಿಂದ ಸಹಜವಾದದೆಂತ ದೃಢಪಡಿಸಬೇಕು.

5. ದರಖಾಸ್ತುದಾರರ ಮೂಲತಲೆಮಾರುಗತಿಗೆ ಸಂಬಂಧಪಟ್ಟ ವಂಶವೃಕ್ಷವನ್ನು ಸಾಲದ ದರಖಾಸ್ತು ಸಂಗಡ ಕಳುಹಿಸಬೇಕು. ಈ ವಂಶವೃಕ್ಷವು ಸರಿಯಾಗಿರುವುದೆಂದು ಆ ಸ್ಥಳದ ನಿವಾಸಿಗಳ ಪೈಕಿ ಗೌರವಸ್ಥರಾದ ಮೂವರಿಂದ ದೃಢಪಡಿಸಲ್ಪಟ್ಟಿರಬೇಕು.

6. ಬ್ಯಾಂಕಿನಿಂದ ತೆಗೆದುಕೊಳ್ಳಲಿಚ್ಛಿಸುವ ಸಾಲಕ್ಕೆ ದೀಡುಮಾಡುವ ಸ್ವತ್ತುಗಳಿಗೆ ಸಂಬಂಧಪಟ್ಟ ಕೆಲವು ತಪಶೀಲುಗಳನ್ನು ತಿಳಿಸಬೇಕು. ಈ ತಪಶೀಲುಗಳು ಯಾವವೆಂದರೆ :—

7. ಖಾತೆ, ಸ್ವಾಧೀನಾನುಭವ, ಮೂಜೆ ಮತ್ತು ಜಾಸ್ತಿ ಸರ್ವೆ ನಂಬರು, ವಿಸ್ತೀರ್ಣ, ಆಕಾರ, ತರಹೆ, ಸಾಲೀಯವಾನ ಉತ್ಪತ್ತಿ (ಬೆಟ್ಟು ಮತ್ತು ನಿವ್ವಳ) ಮತ್ತು ಅಂದಾಜು ಬೆಲೆ.

7. ಸಾಲದ ಮೊಬಲಿಗೆ ದೀಡುಮಾಡುವ ಸ್ವತ್ತುಗಳಿಗೆ ಸಂಬಂಧಪಟ್ಟ ಮೂಲ ದಸ್ತೇವೇಜುಗಳು ಒಂದು ವೇಳೆ ಅಂಥಾ ಮೂಲ ದಸ್ತೇವೇಜುಗಳು ಹಾಜರಿಲ್ಲದ ಪಕ್ಷದಲ್ಲಿ ದೃಢಪಡಿಸಿದ ಅನಲಿಗೆ ಸರಿಯಾದ ಪ್ರತಿಗಳು, ಇತರ ದಾಖಲೇ ದಸ್ತೇವೇಜು ಇವುಗಳನ್ನು ಕಂದಾಯದ ರೀತಿಗಳ ಸಮೇತ ಕಳುಹಿಸಬೇಕು. ಆಧಾರ ಮಾಡುವ ಸ್ವತ್ತುಗಳ ಜಾಬ್ತಿಯೆಯು ಇಂಥಿಂಥದೇ ಎಂಬುದಾಗಿ ದೃಢಪಡಿಸತಕ್ಕದ್ದಕ್ಕೆ ಬೇಕಾಗಬಹುದಾದ ದಾಖಲೆಗಳನ್ನೆಲ್ಲಾ ಕೊಡಬೇಕು.

8. ಸ್ವತ್ತುಗಳು ವಿತರ್ಜಿತವಾಗಿದ್ದು ಮೂಲ ದಸ್ತೇವೇಜುಗಳು ಇಲ್ಲದೇಲೇ ಇರುವ ಸಂದರ್ಭದಲ್ಲಿ 30 ವರುಷಗಳ ವಿರ್ದಿ ಮತ್ತು ಪೇತಾವಾರ ಪತ್ರಿಕೆಯ ಉಲ್ಲೇಖನವನ್ನು (ಎಕ್ಸ್‌ಟ್ರಾಕ್ಟನ್ನು) ಕಳುಹಿಸಬೇಕು. ಮತ್ತು ಆಧಾರಮಾಡುವ ಸ್ವತ್ತುಗಳು (ಅವುಗಳನ್ನು ತಪಶೀಲಾಗಿ ನಮೂದಿಸಿ) ದರಖಾಸ್ತುದಾರರಿಗೇ ನೇ ಸೇರಿದ್ದಿಂತಲೂ ಆ ಸ್ವತ್ತುಗಳ ಮೇಲೆ ಯಾವ ವಿಧವಾದ ಪೂರ್ವಾದಿಯೂ ಇಲ್ಲವೆಂತಲೂ ಮತ್ತು ದರಖಾಸ್ತುದಾರರ ಸ್ವಾಧೀನಾನುಭವದಲ್ಲಿಯೇ ಇರುತ್ತೆಂತಲೂ ಮೂರು ಮಂದಿ ಗೌರವಸ್ಥರಿಂದ ದೃಢಪಡಿಸಲ್ಪಟ್ಟಿದ್ದಾಗಿರಬೇಕು. ಇದೂ ಅಲ್ಲದೆ ರಿಜಿಸ್ಟ್ರೇಷನ್ ಆಫ್ ಡೀಡ್ಸ್ ಕಾನೂನು ಜಾರಿಗೆ ಬಂದಿರುವ ಸಂದರ್ಭಗಳಲ್ಲಿ ಪೂರ್ವಾದಿ, ಹಕ್ಕುದಾರಿಕೆ ವಗೈರೆ ವಿಷಯವಾಗಿ ಸರಿಯಾದ ಅಧಿಕಾರಿಗಳಿಂದ ಬರೆಯಲ್ಪಟ್ಟಿರುವ ಸರ್ಚಿಫಿಕೇಟಿನ ನಕಲನ್ನು ಹಾಜರು ಮಾಡಬೇಕು.

9. ದರಖಾಸ್ತುದಾರರು ವಿಧವೆ ಕುಟುಂಬಕ್ಕೆ ಸೇರಿದವರೋ ಅಥವಾ ಅವಿಭಕ್ತ ಕುಟುಂಬಕ್ಕೆ ಸೇರಿದವರೋ ಎಂಬ ವಿಷಯವನ್ನು ತಿಳಿಸಬೇಕು. ವಿಧವೆ ಕುಟುಂಬಕ್ಕೆ ಸೇರಿದವರಾದರೆ ವಿಚಾರಸತ್ರಿಕೆಯನ್ನು ಕಳುಹಿಸಿಕೊಡಬೇಕು. ಅವರು ಅವಿಭಕ್ತ ಕುಟುಂಬಕ್ಕೆ ಸೇರಿದವರಾದರೆ ಆಧಾರ ಮಾಡುವ ಸ್ವತ್ತುಗಳಲ್ಲಿ ಹಕ್ಕು, ಜಾಬ್ತಿತೆ ಉಳ್ಳ ದರಖಾಸ್ತುದಾರರ ಕುಟುಂಬಕ್ಕೆ ಸೇರಿದವರೆಲ್ಲರೂ ಸೇರಿ ಜಂಟಿಯಾಗಿ ಆಧಾರ ದಸ್ತೇವೇಜನ್ನು ಒರೆದುಕೊಡಬೇಕು. ಅಥವಾ ಅವಿಭಕ್ತ ಕುಟುಂಬದ ಮ್ಯಾನೇಜುಮೆಂಟಿನ್ನು ದರಖಾಸ್ತುದಾರರು ಮಾಡಿಸಿರುವುದಾಗಿಯೂ ಅವಿಭಕ್ತ ಕುಟುಂಬಕ್ಕೆ ಸೇರಿದ ಇತರ ವಾರಸಾದಾರರು ದರಖಾಸ್ತಿನಲ್ಲಿ ನಮೂದಿರುವ ಉದ್ದೇಶಗಳಿಗಾಗಿಯೇ ಸಾಲವನ್ನು ವಜೆಯವುದಕ್ಕೆ ಈ ದರಖಾಸ್ತುದಾರರು ಈ ಸಾಲವನ್ನು ಪಡೆಯಲು ಅಧಿಕಾರವನ್ನು ಹೊಂದಿರುವುದಾಗಿ ತಿಳಿಸುವ ಕ್ರಮವಾದ ಪ್ರಮಾಣ ಪತ್ರಿಕೆಯನ್ನು ಕಡೆದು ಹಾಜರು ಮಾಡಬೇಕು.

10. ಮೈನರುಗಳ ಆಸ್ತಿಯ ಮ್ಯಾನೇಜುಮೆಂಟನ್ನು ಮೈನರುಗಳಿಗಾಗಿ ನಡಯಿಸುವುದಕ್ಕೆ ಕ್ರಮವಾದ ಅಧಿಕಾರವನ್ನು ಹೊಂದಿರುವ ದರಖಾಸ್ತುದಾರರು ಸದರಿ ಮೈನರುಗಳ ಸ್ವತ್ತುಗಳ ಆಧಾರದ ಮೇಲೆ ತಾವು ಸಾಲವನ್ನು ತೆಗೆದುಕೊಳ್ಳುವುದು ನ್ಯಾಯಸಮ್ಮತವಾದ ಅವಶ್ಯಕತೆಗೋಸ್ಕರವಾಗಿ ಮಾತ್ರವೇ ಎಂಬುವುದಕ್ಕೆ ತೃಪ್ತಿಕರವಾದ ರುಜುವಾತನ್ನು ಕೊಡಬೇಕು.

11. ಬ್ಯಾಂಕಿನಿಂದ ಪಡೆಯಬೇಕೆಂದಿರುವ ಸಾಲದ ಮೊಬಲಿಗೆ ದೀಡುಮಾಡುವ ಭೂಸ್ಥಿತಿಗಳು ತಕ್ಕನ್ನು ಬೆಲೆ ಬಾಳದೆ ಇರುವಂತೆ ಕಂಡುಬರುವುದಾದರೆ ಆಸ್ತಿವಂತರಾದ ದೊಡ್ಡಮನುಷ್ಯರನ್ನು ದರಖಾಸ್ತುದಾರರು ಜಾಮೀನು ಕೊಡಬೇಕು. ಅಥವಾ ಮೈಸೂರು ಸರಕಾರದ ಸಾಲದ ಪತ್ರಗಳನ್ನಾಗಲಿ, ಮೈಸೂರು ಬ್ಯಾಂಕಿನ ಷೇರುಗಳನ್ನಾಗಲಿ, ಇನ್ಷ್ಯೂರೆನ್ಸ್ ಪಾಲಿಸಿಗಳನ್ನಾಗಲಿ ಅಥವಾ ಬ್ಯಾಂಕಿನವರು ಒಪ್ಪಬಹುದಾದ ಇನ್ನಾವ ವಿಧವಾದ ಸ್ವತ್ತನ್ನಾದರೂ ಭೂಸ್ಥಿತಿಗಳ ಜೊತೆಗೆ ದೀಡು ಮಾಡಬೇಕು.

12. ದರಖಾಸ್ತುದಾರರು ತಮ್ಮ ಸಾಲದ ದರಖಾಸ್ತುಗಳಲ್ಲಿ ನಮೂದಿಸಿರುವ ವಿಷಯಗಳೆಲ್ಲವೂ ಸತ್ಯವಾದವುಗಳೆಂತಲೂ ಕರಾರ್ವಾಕಾಗಿ ಇವುವೆಂತಲೂ ನಮೂದಿಸಿ ಕ್ರಮವಾದ ಪ್ರಮಾಣ ಪತ್ರಿಕೆಯನ್ನು ಪಡೆದು ಹಾಜರು ಮಾಡಬೇಕು.

ಬೋರ್ಡಿನ ಅಪ್ಪಣೆ ಪ್ರಕಾರ,

ಕೆ. ಶ್ರೀಕಂಠಯ್ಯ, ಸೆಕ್ರೆಟರಿ.

TAI NADU

13—11—1928

On Men and Things.

(By Shama)

The air is thick with rumours of prosecutions and deportations. People incessantly ask me if it is true that all the papers which dared to speak the truth are going to be stopped They also pelt me with questions if it is true that Messrs .... are going to be deported, I only reply, "It is all for good" The Bureaucracy can do anything. Its autocratic powers are immense. When enraged, it behaves like a bear. Therefore, it is no use complaining. The people who stand for truth and justice must be prepared for all persecutions. In British India, to day Lalaji recieved lathi blows at the hands of the Police. And Lalaji is acclaimed all over India In Mysore, Mr, Sanjiva Rao was assaulted by a Police Inspector. Mr. Sanjiva Rao deserves congratulations Similarly, all those who are persecuted by Government to-day in Mysore are erecting imperishable monuments, to themselves in the Temple of Truth and Justice. The more the persecution, the merrier it is. Bravo! Bureaucracy, Go on. Ride rough shod Trample truth and justice under your heels. You will also be remembered eternally. But in a different way!

The Viswesweraiya Committee concluded its labours on Wednesday, the 7th inst. It is not known how long it will take for the report to come out Whether the Committee's report will find acceptance with the Government or not the impartial public has enough material to judge what is rotten in this model state. What transpired in the camera, the public are not in a position to know But all the same, enough dirty linen has been washed and public have been awakened to a correct knowledge as to men and things in Mysore In my opinion, whether there will be divided verdict or not, enough evidence has come to light and the public opinion has been roused to day as never before This in itself, is a supreme benefit conferred upon the people by the Committee

ಆತ್ಮಹತ್ಯೆ

ಕಳೆದಬಾನುವಾರ ರಾತ್ರಿ ಮೈಸೂರು ಚಾಮರಾಜಪುರಂ ರೈಲ್ವೆ ಸ್ಟೇಷನ್ನಿನಿಂದ ಒಂದೆರಡು ಫರ್ಲಾಂಗು ಗಳಷ್ಟು ದಕ್ಷಿಣಭಾಗದಲ್ಲಿ ರೈಲು ಬರುವ ಸಮಯದಲ್ಲಿ ಮೈಸೂರು ಡಿಸ್ಟ್ರಿಕ್ಟ್ ಕೋರ್ಟಿನ ಗುಮಾಸ್ತೆಯಾದ ಪುಟ್ಟಮ್ಮಣ್ಣಿ ಎಂಬಾತನು ಕಣ್ಣಿಗೆ ಬಟ್ಟೆ ಕಟ್ಟಿಕೊಂಡು ಕಂಬಿಯಮೇಲೆ ಮಲಗಿದ್ದನೆಂದೂ ರೈಲಿಗೆ ಸಿಕ್ಕಿ ಮೃತನಾದನೆಂದೂ ತಿಳಿಯ ಬರುತ್ತದೆ ಸಾರಾಸಗಿಯ ದಿನ ಪೋಲೀಸಿನವರು ಆ ಸ್ಥಳಕ್ಕೆ ಹೋಗಿ ತನಿಖೆ ಮಾಡಿದ್ದರಲ್ಲಿ ಅತನ ಅಂಗಿಯು ಬೆಂಬಿನಲ್ಲಿ ಎರಡು ತಾಗದಗಳಿದ್ದವೆಂದೂ ಅವುಗಳಿಂದ ಅತನು ಗೃಹಸ್ಥಾಶ್ರಮದ ಮನಸ್ತಾಪಗಳಿಗಾಗಿ ಆತ್ಮಹತ್ಯೆ ಮಾಡಿಕೊಂಡನೆಂದೂ ತಿಳಿದುಬರುತ್ತದೆ.

ವಿದ್ಯಾರ್ಥಿಗಳ ಕಮಿಟಿಯ ಸ್ಥಾಪನೆ

ಬೆಂಗಳೂರು ಗಣಪತಿಯವಿಚಾರದಲ್ಲಿ ಗಲಾಟೆಯಾದಾಗ ಮೈಸೂರಿನಲ್ಲಿ ಕಾಲೇಜಾದಿವಿದ್ಯಾರ್ಥಿಗಳು ಸ್ವೈಚ್ಛೆಯಾಗಿ ಸಮಿತಿಯೊಂದು ಸರ್ವಾಧಿಕಾರವಾಗಿದೆ. ಇಂಥಾ ಸ್ವೈಚ್ಛೆಗಳು ಇನ್ನಮುಂದೆ ಸಂಭವಿಸಿದಂತೆ ಕಾಲೇಜ್ ಪ್ರಿನ್ಸಿಪಾಲ್ ಜೆ ಸಿ ರೋಲೊರಿಂದು ವಿದ್ಯಾರ್ಥಿಗಳ ಕಮಿಟಿಯನ್ನು ನಿರ್ಮಿಸಿದ್ದಾರೆ. ಈ ಕಮಿಟಿಗೆ ಎಲ್ಲಾ ತರಗತಿಗಳಿಂದಲೂ ಇಬ್ಬಿಬರು ವಿದ್ಯಾರ್ಥಿಗಳನ್ನು ಪ್ರತಿನಿಧಿಗಳಾಗಿ ವಿದ್ಯಾರ್ಥಿಗಳೇ ಚುನಾವಣೆ ಮಾಡಿದ್ದಾರೆ ಇಲ್ಲಿಗೆ ಯೂನಿಯನ್ ವೈಸಾಪ್ರಸಿಡೆಂಟೂ ಮತ್ತು ಸಕ್ರೆಟರಿಗಳೂ ವೆಂಬಂಗಳಾಗಿ ನೇಮಿಸಲ್ಪಟ್ಟಿದ್ದಾರೆ ಕಮಿಟಿಯ ಮೆಂಬರುಗಳ ಪೈಕೆ ಒಬ್ಬರು ಅಧ್ಯಕ್ಷರಾಗಿ ಚುನಾಯಿಸಲ್ಪಟ್ಟಿದ್ದಾರೆ. ವಿದ್ಯಾರ್ಥಿಗಳ ಕಷ್ಟಸುಖಗಳನ್ನು ಪ್ರಿನ್ಸಿಪಾಲರಿಂದಲೂ ತಿಳಿಸಿಬಲ್ಲವರೂ ಸೌಮ್ಯವಾಗಿ ನಡೆಯಿಸುವುದೇ ಈ ಕಮಿಟಿಯ ಮುಖ್ಯ ಕಾರ್ಯವಾಗಿದೆ

ಬೆಂಗಳೂರಿನ ಗಲಭೆಯ ಮೊಕದ್ದಮೆಗಳ.

ಅಡಿಷನಲ್ ಸೆಷನ್ಸ್ ಜಡ್ಜರವರು ಬೆಂಗಳೂರು ಸಿಟಿ ಸಿವಿಲ್ ಸೆಷನ್ಸ್ ಕೋರ್ಟಿನಲ್ಲಿ ಈ ಕೆಳಗಿನ ವಿಚಾರಣೆಗಳನ್ನು ದಾಖಲಾತ್ತುವಂತಾಗಿಬಹುದೆಂದು ಇನಿನಂಗಮೇಲೆ ಪತ್ರಿಕೆಯು ತಿಳಿಸುತ್ತದೆ.

1) 11 ಮಹಮ್ಮದೀಯರುಗಳ ಮೇಲೆ ದೊಂಬಿ ಸಡಿಸಿದ್ದಕ್ಕಾಗಿ.

2) ಜೆ ಭೀಮರಾವ್, ತಿವಾರಿ, ಸುಬ್ರಹ್ಮಣ್ಯಂ ಮತ್ತು ಕೆಲವು ವಿದ್ಯಾರ್ಥಿಗಳುಮೇಲೆ ದೊಂಬಿಗಾಗಿ.

3) ಸರ್ವಾಫಲ್ಲರು, ಸೀತಾರಾಮಶಾಸ್ತ್ರಿಗಳು ಕೆಲವರು ವಿದ್ಯಾರ್ಥಿಗಳುಮೇಲೆ ದೊಂಬಿಗಾಗಿ

4) ಸುಬ್ರಹ್ಮಣ್ಯಂರವರುಮೇಲೆ 153 A. ಸೆಕ್ಷೆನ್ ಪ್ರಕಾರ ರಾಜದ್ರೋಹಕ್ಕಾಗಿ.

5) ತಿಮ್ಮಕಾಯಸ್ಥ ಮತ್ತು ಇತರರುಮೇಲೆ ದೊಂಬಿಗಾಗಿ.

6) ಚಿಕ್ಕ ರಂಗಸ್ವಾಮಿಮೇಲೆ ಗಾಯಪಡಿಸಿದ್ದಕ್ಕಾಗಿ

7) ಮುನಿಸಿಪಾಲಿಟಿಯವರು ಇತರರುಮೇರಿ ಗಾಯಪಡಿಸಿದ್ದಕ್ಕಾಗಿ.

ಆಬ್ಬಾ! ಖಾನ್‌ರುಮೇಲೆ ಯಾವ ಮೊಕದ್ದಮೆಯೂ ಇಲ್ಲ

ದಿವಾನರಲ್ಲೂ ನಮ್ಮಾರದಲ್ಲೂ ನಂಬ

ಮಿ॥ ರಾ॥ ಹೊಸಕೊಪ್ಪ ಕೃಷ್ಣರಾಯರವರು ದ್ರಾವಿಡನ್ ಸ್ವರಾಜ್ಯ ಪತ್ರಿಕೆಗೆ ಬರೆದಿರುವುದೇನೆಂದರೆ

ಅಸೆಂಬ್ಲಿಯಲ್ಲಿ ಅಕ್ಟೋಬರ್ ೩೦ ನೇ ತಾ॥ ನಸ ಪತ್ರಿಕೆಗಳ ವಿಷಯವಾಗಿ ನಡೆದ ಚರ್ಚೆ ಮಿ॥ ರಾ॥ ಕೆ. ಟಿ. ಭಾಷ್ಯಂ ಅಯ್ಯಂಗಾರ್ಯರೊಡನೆ ನಾನು ಸಹಮತನಾಗಿದ್ದನೆಂಬ ಅಭಿಪ್ರಾಯ ಒರುವಂತೆ ತಮ್ಮ ಪತ್ರಿಕೆಯಲ್ಲಿ ಪ್ರಕಟವಾ ಇದು ಸರಿಯಲ್ಲ. ಇದರಿಂದ ವಾಚಕರಲ್ಲಿ ತಪ್ಪು ಪ್ರಾಯ ಉಂಟಾಗಬಹುದು. ಶ್ರೀಮದ್ಮಹಾರಾ ವರಿಗೆ ರಾಜಭಕ್ತಿಯನ್ನು ಅರ್ಪಿಸುವ ವಿಷಯದಲ್ಲೇ ಟಿಣೆ ಸತ್ರಿಕೆಯು ಪರದಿಯನ್ನು ಖಂಡಿಸುವದರಲ್ಲೇ ನಾನು ಅವರೊಡನೆ ಸಹಮತನಾಗಿದ್ದೆ. ದಿವಾನರ ಶ್ವಾಸನವನ್ನು ಸೂಚಿಸುವ ಸಲುವೆಗೆ ನಾನು ಸಹ ನಾಗಿರಲಿಲ್ಲ. ನನ್ನ ಅಭಿಪ್ರಾಯದಲ್ಲಿ ವಿಶ್ವೇಶ್ವರ ಕಮಿಟಿಯವರ ನಂದಿಯು ಪ್ರಕಟವಾಗುವವರೆಗೂ ಕಾಲದ, ಅಧಿಕಾರಗಳ ಮತ್ತು ಪತ್ರಿಕೆಗಳ ವಿಷಯ ಗಿ ಅಭಿಪ್ರಾಯವನ್ನು ಕೊಡುವುದಕ್ಕಾಗುವುದಿಲ್ಲ ನೆರಿಲ್ಲಿಯಲ್ಲಿ ಬೆಂಗಳೂರು ಗಲಭೆಗಳ ವಿಷಯವಾ ರ್ಕಾರದಧಿಕಾರಿಗಳ ಕರ್ತವ್ಯಾ ಕರ್ತವ್ಯಗಳನ್ನು ವಿಚಾ ಸುವ ರಾಮನೇ ಚರ್ಚೆಗೆ ತರಕೂಡದೆಂದು ಅಡ್ಡಿ ದಾಗ್ಗೆ ನಮ್ಮಾರದ ವಿಷಯವಾಗಿಯೂ, ದಿವಾನರ ಯವಾಗಿಯೂ ಏನು ಅಭಿಪ್ರಾಯವನ್ನು ಕೂಡ ಕ್ಕ ಸಾಧ್ಯ? ಅಸೆಂಬ್ಲಿಯಲ್ಲಿ ಆಗ ನಡೆದಿದ್ದುದು ದು ರಾಮನ ಚರ್ಚೆಯಲ್ಲ. ಚರ್ಚೆಯ ದ ವಿಷ ಕಾರ್ಯಕ್ರಮದಲ್ಲಿರಲಿಲ್ಲ. ಮೆಂಬರುಗಳು ಅಸೆಂ ಪದ್ದು ಬನ್ನನ್ನು ಮೀರಿ ಚರ್ಚೆಯನ್ನು ನಡೆಸಿ ಮಿ॥ ರಾ॥ ಭಾಷ್ಯಂ ಅಯ್ಯಂಗಾರ್ಯರವರೇ ರ್ಚೆಯು ನಿಬಂಧನೆಗಳಿಗೆ ವಿರೋಧವೆಂದು ಸೂ ದು. ಅಧ್ಯಕ್ಷರವರು ದಾಖಲಿಟ್ಟು ದಾರಿಗೆಹೊ ಗಂಟೆಗಳ ಕಾಲ ಅಸೆಂಬ್ಲಿಯು ಅಡ್ಡಾದಿಡಿಯ ಪನ್ನು ನಡೆಸುವಂತೆ ಅವಕಾಶಕೊಟ್ಟರು ನಾನ ತ್ತೊಂದು ವಿಷಯವನ್ನು ಸ್ಪರ್ಶಪಡಿಸುತ್ತೇನೆ ಗಳನ್ನು ನಿರ್ಬಂಧಪಡಿಸಬೇಕೆಂದಾಗಲಿ, ಅವುಗಳ ಕ್ಷಮವನ್ನು ನಡೆಸಬೇಕೆಂದಾಗಲಿ ಅಸೆಂಬ್ಲಿಯು ಮೊಕದಿಂದ ಅಭಿಪ್ರಾಯವನ್ನು ಕೊಡಲಿಲ್ಲ. ಆ ವ ಪ ತೀರ್ಮಾನವೇ ಅಸೆಂಬ್ಲಿಯ ಮುಂದೆ ಬಂದಿ

ಮಿ॥ ರಾ॥ ಕೃಷ್ಣರಾಯರು ಸಕಾಲದಲ್ಲಿ ತ ಪ್ರಾಯವನ್ನು ವ್ಯಕ್ತಪಡಿಸುವರು. ಶ್ರೀಮಹಾ ರಾಜರವರ ಮೇಲೆ ಇರುವ ವಿಶ್ವಾಸಕ್ಕೆ ಸಮಾ ರ ಮೇಲೆ ಇರುವ ವಿಶ್ವಾಸವನ್ನೂ ವ್ಯತ್ಯಾಸವಿರ ಸ್ಮಾರ್ಯರವರುಮೇಲೆ ವಿಶ್ವಾಸವಿಲ್ಲವೆಂದು ಹೇಳ ದು ರಾಜದ್ರೋಹವಲ್ಲ. ಪತ್ರಿಕೆಗಳ ವಿಷಯ ಮಿ॥ ರಾ॥ ನೀಲಗಿರಿ ಸಂಜೀವಯ್ಯನವರು ಹೊ ಇತರರು ಯಾರೂ ಅವುಗಳನ್ನು ನಿಲ್ಲಿಸೇಕೆಂದು ಲ್ಲ.

ಸೂ ಚ ನೆ

ವೀಸಾನೆಯು ಹುಟ್ಟುದ ಪ್ರಯುಕ್ತ ನಾಳೆ ದಿವಸ ಪತ್ರಿಕೆಯು ಹೊರಡುವುದಿಲ್ಲ.

ವ್ಯಾ

Regd No. M. 2322 ॥ ವಂದೇ ಮಾತರಂ ॥ ಪ್ರತಿ ೩ ಪೈ

ತಾಯಿನಾಡು.

ಪ್ರತಿ ದಿನವೂ ಮೈಸೂರಿನಲ್ಲಿ ಪ್ರಕಟವಾಗುವುದು

ಸಂವಾದಕ-
ಪಿ ಆರ ರಾಮಯ್ಯ

ಸುಖ ದುಃಖೇ ಸಮೇಕೃತ್ವಾ ಲಾಭಾಲಾಭೌ ಜಯಾಜಯೌ ।
ತತೋ ಯುದ್ಧಾಯ ಯುಜ್ಯಸ್ವ ನೈವಂ ಪಾಪಮವಾಪ್ಸ್ಯಸಿ ॥ ಗೀತಾ ॥

ವಾರ್ಷಿಕ ಚಂದಾ { ಸ್ಥಳಕ್ಕೆ ೫-೦-೦ ; ಪರಸ್ಥಳಕ್ಕೆ ೧೦೦-೮

ಸಂಪುಟ ೧] ಮಂಗಳವಾರ ೧೩ ನವಂಬರ್ ೧೯೨೮ [ಸಂಚಿಕೆ ೪೧

ನಿಮ್ಮ ಆರೋಗ್ಯದ ಮಾರ್ಗವು ಅಮೃತಾಂಜನದಲ್ಲಿರುವುದು

ಎಲ್ಲಾ ನೋವುಗಳೂ ಅಮೃತಾಂಜನದಿಂದ ಗುಣವಾಗುತ್ತಿರುವುದು

ತಲೆನೋವು — ಕೆಮ್ಮು
ವಾತಶೂಲೆ — ನೆಗಡಿ
ಬೆನ್ನು ನೋವು — ಸುಟ್ಟ ಘಾಯ
ಕಟಿಶೂಲೆ — ಹುಣ್ಣುಗಳು
ಪಾರ್ಶ್ವವಾಯು — ಉಳುಕಿದ ನೋವು

ಅಮೃತಾಂಜನ ಡಿಪೋ

ಮದರಾಸು. ಬೊಂಬಾಯಿ

ಹಹ ! ಹೀ ! ನುಖವೇ ನುಖ ! !!

ನಿಮಗೆ ಟಾನಿಕ್ ಬೇಕಾಗಿದೆಯೇ ? ಹಾಗಾದರೆ ಲೋಕಪ್ರಸಿದ್ಧವಾಗಿರುವ

ಆತಂಕನಿಗ್ರಹ ಮಾತ್ರೆಗಳನ್ನೇ

ಉಪಯೋಗಿಸಿರಿ

ಏತಕ್ಕೆಂದರೆ ಇವೇ ಈಗಿನ ಟಾನಿಕ್‌ಗಳಲ್ಲೆಲ್ಲಾ ಉತ್ತಮವಾದವು. ಕ್ರಯ ಡಬ್ಬಿ 1 ಕ್ಕೆ 1-0-0

ಈ ವಿಜ್ಞಾಪನೆಗಳಲ್ಲಿ ನಮ್ಮ ಔಷಧಗಳು ದೊರೆಯುತ್ತವೆ. ಆತಂಕ ನಿಗ್ರಹ ಔಷಧಾಲಯ
ಗೃಹವು, ಶಂಕೂರು, ದಾವಣಗೆರೆ, ತಿವಮೊಗ್ಗ, ಹಾಸನ, ಚಿಕ್ಕಮಗಳೂರು. ಚಿಕ್ಕಪೇಟೆ, ಬೆಂಗಳೂರು ಸಿಟಿ.

ಮಕ್ಕಳ ಆರೋಗ್ಯವೇ ತಂದೆತಾಯಿಗಳ ಭಾಗ್ಯವಲ್ಲವೆ ?

ಈ ಎರಡು ಕುಟುಂಬರತ್ನಗಳನ್ನು ಸಮೀಪದಲ್ಲಿರಿಸಿಕೊಂಡಿರಿ.

ಸಿದ್ಧ ವೈದ್ಯಸೇವಾದಿಯಲ್ಲಿ ಸಮಸ್ತ ರೋಗಗಳನ್ನೂ ಪರಿಹರಿಸುತ್ತದೆ.

ಬಾಲಸೆಂಜೀವಿನಿ.—ಮಕ್ಕಳಿಗೆ ೧-೩ ವೇಳೆ ಸುಖವಾಗಿ ಭೇದಿಮಾಡಿಸಿ ಸಮಸ್ತ ವಿಧ ಜ್ವರ, ಅಜೀರ್ಣ ವಾಯುಗಳನ್ನು ಪರಿಹರಿಸುತ್ತದೆ. 50 ಮಾತ್ರೆ 4 ಆಣೆ

ತ್ರೀಕರ ಕಸ್ತೂರಿಮಾತ್ರೆ —ಳೆ ಮಳೆ ಬಿಸುವ ಸುವಾಸನೆಯುಳ್ಳ ತೀ ಮಾತ್ರೆಗಳನ್ನು ಕಾಂಬೂಲದೊಡನೆ ಸೇವಿಸಿದರೆಲ್ಲಾ ಹವಾಗಳಲ್ಲೂ ಎಲ್ಲಾ ದೇಶಗಳಲ್ಲೂ ಶರೀರದ ಆರೋಗ್ಯವನ್ನು ಕಾಪಾಡುತ್ತದೆ. ಮಕ್ಕಳ ಮತ್ತು ದೊಡ್ಡವರ ಕೆಮ್ಮು, ನೆಗಡಿ, ಜ್ವರ, ಹಲ್ಲುನೋವು ತೀಕವಾಯು, ಬ್ಲೇಗು ಇನ್ಫ್ಲುಯೆಂಜ, ಕಾಲಾಮುತಾದ್ದನ ಪಾಕರಿ ಗುಣಪಡಿಸುತ್ತದೆ ಪ್ರತಿಮನೆಗಳಲ್ಲೂ ಅತ್ಯವಶ್ಯಕ ಇರಬೇಕಾದದ್ದು ಬೆಲೆ ೩೯ನೆ 1 ಕ್ಕೆ 4 ಆಣೆ

ವಿಸಲುಕಾಲಕ್ಕೆ ಅಮೂಲ್ಯವಾದ ಕೈಲ ಪರಬತ್ತು, ಲೇಹಗಳು ಸಿದ್ಧವಾಗಿವೆ.

ಆಯುರ್ವೇದ ವಿದ್ವಾ ಭಿಷಗ್ರತ್ನ ಬಿ. ವಿ. ಪಂಡಿತರು,
ಸದ್ವೈದ್ಯಶಾಲಾ, ನಂಜನಗೂಡು

ತಾಯಿನಾಡು.

(ಪ್ರಚಾರೋತ್ಸವನ್ನು ಪ್ರತಿಪಾದಿಸುವ ಪತ್ರಿಕೆ)

ವಂದೇಮಾತರಂ ಲಾಡ್ಜ್ ಮೈಸೂರು

Our Agents

Copies of Tai Nadu, Daily and Weekly are available for sale at the following places —

1 I N P Venkatappa & Co
Excelsior Type-writing Institute, Balepet, Bangalore City.
2 Koppada Ramakrishnaiah, Agent, Hassan
3 Siddiah, Sri Nanjundeswara Bank Ltd Nanjangud
4 M N. S & Sons, Lansdowne Buildings, Mysore.
5 B V Pandit & Co, Lakshmivilas Road, Mysore.
6 Friends' Union, Mysore.
7 Sweet Mart, Lansdowne Buildings, Mysore.

TAI NADU (Daily Edition.)

The Leading Nationalist Daily of Mysore.

ಎಂ. ಎಸ್. ಸಿದ್ದಪ್ಪ ಬ್ರದರ್ಸ್

ಪಾರ್ಶ್ವನಿಯಂ ವ್ಯಾಪಾರಿಗಳು, ಮೈಸೂರು.

ಎಂ. ಎಸ್. ಸಿದ್ದಪ್ಪ ಬ್ರದರ್ಸ್‌ರವರು ಉತ್ತಮವಾದ ಹಾರ್ಮೋನಿಯಂಗಳನ್ನು ಕಡಮೆ ಬಾಡಿಗೆಗೂ ತಿಂಗಳು ಗಟ್ಟಲೇ ಕಂತಿಗೂ ಸಹಾ ಯಾರಯಂಗೆ ಬೇಕಾದರೂಕಳಿಸಿಕೊಡುವ ಏರ್ಪಾಡು ಮಾಡಿದ್ದಾರೆ. ಮತ್ತು ಹೊಸ ಮಾದರಿಯಾದ ಜೋಳಿಗೆ ಹಾರ್ಮೋನಿಯಂಗಳನ್ನು ಸರ್ಕಾರ ಆಸ್ಥಾನಿಕಾಲಿಗಳಿಗೆ ಮಾತ್ರ ಕೊಡುವ ಏರ್ಪಾಡು ಮಾಡಿದ್ದಾರೆ. ಮತ್ತು ಹಳೆಯ ಹಾರ್ಮೋನಿಯಂಗಳನ್ನು ಕೊಂಡುಕೊಳ್ಳುವರು. ಮತ್ತು ಬದಲಾಯಿಸಿಕೊಡುವರು. ಮತ್ತು ಹಾರ್ಮೋನಿಯಂ ಕೆಲಸವನ್ನು ಚೆನ್ನಾಗಿ ಬಲ್ಲವರು. ಮತ್ತು ಹಾರ್ಮೋನಿಯಂ ಕೆಲಸವನ್ನು ಚೆನ್ನಾಗಿ ಕಲಿಸು

ತಾಯಿ ನಾಡು.

12—11—1928

ಎಲ್. ಎನ್. ರಾಜುರವರ ಪತ್ರ

ಎಲ್. ಎನ್. ರಾಜೂರವರು ಪಿ. ನಾಗಪ್ಪನವರಿಗೆ ಬರೆದಿರುವ ಪತ್ರವನ್ನು ಬರೆದಿಧಾರೆ. ಅದರಲ್ಲಿ ಅವರು ಹೇಳಿರುವ ಸಂದರೆ. (ನವಂಬ‘ ೧ ನೇ ತಾರೀಖಿನಲ್ಲಿ ನಾಗ ಮಿಯ ಹ್ಯಾಲೀ ಮೆಮೋರಿಯಲ್‌ರಾ ಹಾಲಿನಲ್ಲಿ ಕೊ ಹೇಳಿಕೆಯನ್ನು ಓದಿಧೇನೆ. ನನ್ನ ಹೇಳಿಕೆಗಳು ನಿ ಕಾಂಡವಾದುಗಳು ಮತ್ತು ತಪ್ಪಿನಿಂದ ಕೂಡಿದವು ಎಂದು ನಾಗಪ್ಪನವರು ಹೇಳುವುದು ಆಜಿಗೆ ಭಸುವುದಿಲ್ಲ. ನನಗೆ ಖಾಟೇ ಸವಾಲುಗಳನ್ನು ಕ ನನ್ನ ಹೇಳಿಕೆಗಳಲ್ಲಿರುವ ಸುಳ್ಳುಗಳನ್ನು ಕೋರಿ ಕೆಂದು ನಾನು ಬಿತ್ತಿ ಹೇಳಿಕಾಗ್ಯೂ ನಾಗಪ್ಪನ ಹಾಗೆ ಮಾಡದೆ, ನನಗೆ ಖಾಟೇಸವಾಲುಗಳನ್ನು ಕಿ ಕಮಿಟಿಯ ಅಮೂಲ್ಯವಾದ ಸಮಯವನ್ನು ಳಮಾಡುವುದು ತಮಗೆ ಯುಕ್ತವಲ್ಲವೆಂದು ಅವ ಹೇಳಿದರು. ಕಮ್ಮ ಆತ್ಮಸಂರಕ್ಷಣೆಗಾಗಿ ನಾಗಪ್ಪ ಯು ಜೇಕಾದನ್ನದನ್ನು ಹೇಳಿಕೊಳ್ಳಲಿ. ಅದರ ನನಗೆ ಖೇಸವಾಲುಗಳನ್ನು ಹಾಕದೆ ನನ್ನ ಹೇಳಿಕೆಗಳಲ್ಲಾ ಸ್ಯ ಮತ್ತು ನಿರಾಧಾರವಾದವುಗಳೆಂದು ಹೇಳುವ ಅವರಿಗೆ ಯಾವ ಅಧಿಕಾರವೂ ಇಲ್ಲ. ನಾನು ಳ ನನ್ನ ಹೇಳಿಕೆಗಳನ್ನು ಸಮರ್ಥನೆ ಧಾಡಲು ಸಿ ಗಾಗಿಧೇನೆ. ನಾಗಪ್ಪನವರು ಅನೇಕ ಸತ್ಯಗಳನ್ನು ಪಿಹಾಜಿಧಾರೆ. ಅಸತ್ಯಗಳನ್ನು ಸತ್ಯದಂತೆ ತೋರಿಸು ತಾರೆ. ಅನೇಕ ದೊಡ್ಡಮನುಷ್ಯರ ಹೆಸರುಗಳನ್ನು ಕೆ ಲು ಪ್ರಯತ್ನ ಮಾಡಿಧಾರೆ ಎಂಬುದು ನನ್ನ ಭಾ . ಅಕ್ಟೋಬರ್ ೨೦ ನೇ ತಾರೀಖಿನ ದಿನದ ಕಮಿ ಯವರು ನನ್ನನ್ನು ಹೇಳಿಕೆ ಮಾಡಿದಾಗ ನಾಗಪ್ಪನವ ಕಮಿಟಿಯಲ್ಲಿರಲಿಲ್ಲ. ಆದುದರಿಂದ ನಾನು ಕೆಲವು ತುಗಳನ್ನು ಹೇಳುವುದಕ್ಕಾಗಲಿಲ್ಲ. ನನ್ನನ್ನು ಪುನ ಕರೆಸಿ ಖಾಟೇಸವಾಲು ಮಾಡುವ್ಹಾರಂದು ತಿರಿಗಿದ್ದೆ. ನೆ ಹಾಗೆ ಮಾಡಲಿಲ್ಲ. ಅಜ್ಯಾಸಾರ್ಯಾರು ಅಂಚಿ ಡಿಸ್ಟ್ರಿಕ್ಟು ಮ್ಯಾಜಿಸ್ಟ್ರೇಟರ ಕೋರ್ಟಿನ ಮುಂದೆ ಟ್ಟ ಎಾಖ್ಯಾಲಿಟ ಕರ್ತರು ಯಾರು, ಅವೇ ಪೊ ಾದ ಕೆಲವು ಸಂಗತಿಗಳ ವಿಷಯವಾಗಿ ಕೇಳಬೇಕಾ ತ್ತು. ಕ್ಯಾಪ್ಟನ್ ಪೈ. ವಿ. ಅಯ್ಯರವರ ಸ್ಟೇಟುಮೆಂ ನ್ನು ಬರೆದವರು ಯಾರು ಎಂಬುದು ನನಗೆ ಗೊತ್ತಿದೆ . ಎಸ್. ಲಿಂಗೇಗೌಡರು ಕಮಿಟಿ ಮುಂದೆ ಕೊಟ್ಟ ಜ್ಯಾಲದ ಪ್ರೋಸೀಡಿಂಗರು ಯಾರು ಎಂಬುದು ನ ಗೊತ್ತಿದೆ, ಅಕ್ಟೋಬರ್ ೯ ನೇ ತಾರೀಖಿನ ದಿನ ಕಮಿಟಿಯ ಮುಂದೆ ಎಂ. ಎಸ್. ಲಿಂಗೇಗೌಡರು ಳಿದ ಪಿತೂರೀ ಕಥೆಯನ್ನೂ ನಾನು ಒಪ್ಪಲಿಲ್ಲ. ಲಿಂ ಗೌಡರು ಚೀಫ್‌ಕೋರ್ಟಿನ ಈಗಿನ ಸುತ್ತು ಹಿಂದಿ ಪಡ್ಡಿಗಳಮೇಲೆ ಇಲ್ಲದ ಸ್ಟಡ ಆಪಾದನೆಗಳನ್ನು ಎಡಿರುವರು. ನಾನು ನಾಗಪ್ಪನವರನ್ನು ಒಂದು ಶ್ನೆಯನ್ನು ಕೇಳುತ್ತೇನೆ ಅವರು ಸತ್ಯವಾಗಿ ಉತ್ತ ನ್ನು ಹೇಳಲಿ. ಅಕ್ಟೋಬರ್ 10 ನೇ ತಾರೀಖಿನ ಕಮಿಟಿಯವರು ಎಂ. ಎಸ್. ಲಿಂಗೇಗೌಡರನ್ನು ಹೇ ಒಳಗೆ ಪರೀಕ್ಷೆಮಾಡುತ್ತಿದ್ದಾಗ ನಾಗಪ್ಪನವ ನನ್ನ ವಿಷಯವಾಗಿ ತಂದೆಯು ಮರಣೋನ್ಮುಖ ಗಿದ್ದರೂ ಇವನು ಅವರನ್ನು ನೋಡುವುದಕ್ಕೆ ಕೂಡಾ ಹೋಗುವುದಿಲ್ಲ, ಎಂದು ಹೇಳಲಿಲ್ಲವೇ ? ಈ ಮಾತುಗಳನ್ನು ಹೇಳಬಹುದೆ ? ನಾನು ಪಿತೃದ್ರೋಹಿ ಯೆಂದು ನಾಗಪ್ಪನವರು ಹೇಳಬಹುದೇ ಕಮಿಟಿಯ ಮೆಂಬರುಗಳು ನಾಗಪ್ಪನವರು ಹೀಗೆ ಹೇಳಿಲ್ಲ ಎಂದು ಹೇಳಲಿ ನಾನು ನಾಗಪ್ಪನವರನ್ನು ಸುಮ್ಮನೆ ಬಿಟ್ಟು ಬಹುತ್ತೇನೆ ಇಲ್ಲದೆ ಹೋದರೆ ಅವರನ್ನು ಬೇರೆ ನಾನು ಸುಮ್ಮನೆ ಬಿಡುವುದಿಲ್ಲ ನಾಗಪ್ಪನವರನ್ನೂ, ಲಿಂಗೇಗೌಡರನ್ನೂ ನೇರಿಸಿ ಮಾನ ನಷ್ಟಕ್ಕಾಗಿ ಕೋರ್ಟಿನಲ್ಲಿ ದಾವಾಹೂಡುತ್ತೇನೆ.

ಎಸ್ ಎನ್. ಸೆಟ್ಟೂರ್‌ರವರ ಹೇಳಿಕೆ.

ಎಸ್. ಎನ್. ಸೆಟ್ಟೂರ್‌ರವರ ಹೇಳಿಕೆಯು ಅನೇಕ ವಿಷಯಗಳಲ್ಲಿ ವ್ಯಾಧಾಸ್ಯವಾಗಿರುವುದು. ಪ್ರಶ್ನೆ:— ಬ್ರಾಹ್ಮಣ ಪಿತೂರಿಯಲ್ಲಿ ನಿಮಗೆ ವಿಶ್ವಾಸವುಂಟೋ ? ಉತ್ತರ—ಬ್ರಾಹ್ಮಣ ಪಿತೂರಿಯೇ ? ಅದು ಹಾಸ್ಯಾ ಸ್ಪದವು.

ಪ್ರಶ್ನೆ:—ನೀವು ಬ್ರಾಹ್ಮಣರೋ ? ಉತ್ತರ ದುದೆ ವದಿಂದ (ನಗು) ಪ್ರಶ್ನೆ.— ನಿಮಗೆ ಅಪಸಂಖೆ ಇಲ್ಲ ವೋ ? ನೀವು ಅದನ್ನು ಖಂಡಿಸಲಿಲ್ಲವೇ ? ಉತ್ತರ. ಖಂಡಿಸುವ ಅವಶ್ಯಕತೆಯೇ ಇಲ್ಲ. ಮೈಸೂರಿನ ಬ್ರಾಹ್ಮ ಣರು ಮೈಸೂರಿನ ರಾಜ ಮನೆತನಕ್ಕೆ ಎಷ್ಟೋ ಕೃತಜ್ಞ ರಾಗಿರುವಾಗ್ಗೆ ಬ್ರಾಹ್ಮಣರು ಪಿತೂರಿಮಾಡುತ್ತಾರೆಂದು ಊಹಿಸಲೂ ಅಸಾಧ್ಯನಾಗಿರುವುದು. ಪ್ರಶ್ನೆ—ಮಾ ಗಾದರೆ ಒಂದು ಮೀಟಿಂಗನ್ನು ಮಾಡಿ ಪರಾವರ್ತಗಳನ್ನೇ ಕೆ ಮಾಡಿರಿ. ಉತ್ತರ—ನಮ್ಮ ಮೇಲೆ ಇಲ್ಲದ ಸ್ಟಡ ಆರೋಪಣೆಗಳು ಮಾಡಲ್ಪಟ್ಟಾಗ ನಾವು ಅವುಗ ಳನ್ನು ಖಂಡಿಸಬೇಕು. ಪ್ರಶ್ನೆ—ಪತ್ರಿಕೆಗಳ ವಿಷಯದಲ್ಲಿ ನಿಮ್ಮ ಸಲಹೆಯು ಏನಾದರೂ ಇವೆಯೋ ! ಸಂಪೂ ರ್ಣಸ್ವಾತಂತ್ರ್ಯ. ಇನ್ನೇನಾದರೂ ಉಂಟೋ ! ಉ ತ್ತರ—ನಾನು ಕನ್ಸುದಾರನಾದ ಪತ್ರಿಕಾಕರ್ತನಲ್ಲ. ಪತ್ರಿಕೆಗಳೇನೂ ಇನ್ನೂ ಉಚ್ಚ ಉತ್ತಮ ಸ್ಥಿತಿಗೆ ಏಂ ದಿಳ್ಳಬೆಂಬುದನ್ನು ನಾನು ಬಲ್ಲೆ. ಪತ್ರಿಕೆಗಳ ಮೇಲೆ ಹೊಂಗಿಸುವ ಅಧಿಕಾರವು ಯಾವುದೂ ಇರಬಾರದು. ಪತ್ರಿಕಾಕರ್ತರು ತಮ್ಮ ಜವಾಬ್ದಾರಿಯನ್ನು ಅರಿಯ ಬೇಕು. ದೊಡ್ಡಾಜನರು ಪತ್ರಿಕೆಗಳಿಗೆ ಶಿಕ್ಷೆಯನ್ನು ಕಲಿಸಬೇಕು. ಅಪ್ಪಕ್ಕರು ಮಹಾಜನರು ಮಾಗಬೇಡವೇ ! ಉತ್ತರ ಉಚ್ಚ ಆದರ್ಶವಿಲ್ಲದ ಯಾವ ಪತ್ರಿ ಕೆಯೂ ಒಳಗೆ ದಿನದ ಒದಕುವುದಿಲ್ಲ. ಇತರ ಪತ್ರಿಕೆ ಗಳಿಂದ ಆಮ್ದು ಆದಾಯವೂ ಆಗುವುದಿಲ್ಲ.

ಪ್ರಶ್ನೆ:—ಬಲ್ಲಾ ಅಭಿಪ್ರಾಯಗಳ ಪತ್ರಿಕಾ ಕರ್ತ ರುಗಳೂ ಒಂದು ಸಂಘವನ್ನು ಮಾಡಿಕೊಂಡು ಅದರ ಮುಖಾಂತರ ಪತ್ರಿಕೆಗಳನ್ನು ಹತೋಟಿಗೆ ತಂದರೇ ?

ಉತ್ತರ— ನಾನೂ ಅದನ್ನೇ ಹೇಳಬೇಕೆಂದಿದ್ದೆ. ಪತ್ರಿಕಾ ಸ್ವಾತಂತ್ರ್ಯವನ್ನುಳಿಸಿ ಸರಿಯಾದ ಯೋಗ್ಯ ತೆಗಳಿಂದ ಕೂಡಿ ಆ ಕೆಲಸವನ್ನು ಮಾಡಿದರೆ ಆಗಬಹು ದು. ಮಾರ್ಚಿಕ್ಯವೇಲು ಪೊದಲಿಯಾರ್ ಜುಲೈ 30 ನೇ ತಾರೀಖು ಆದಮೇಲೆ ಹೊರಗಿನ ಪತ್ರಿಕಾ ಪ್ರತಿನಿಧಿಗಳು ಅಷ್ಟುಮಂದಿ ಬೈಸೂರಿಗೆಬಂದು ಏತಕ್ಕೆ ವರದಿಯನ್ನು ಕಳುಹಿಸಬೇಕು.

ಉತ್ತರ—ಸ್ಥಳೀಯ ಪತ್ರಿಕೆಗಳ ಬಾಯಿ ಬೇಗಪಾ ದ್ದರಿಂದಲೇ. ಇಲ್ಲಿನ ಗಾಳಿಯನ್ನೆಲ್ಲಾ ಸೆಳೆದರೆ ಮೊರಕಿ ನಿಂದ ಗಾಳಿಯು ಸುಗ್ಗೇ ನಗ್ಗುವುದು.

ಸೆಟ್ಟೂರ್‌ರವರು ಹೇಳಿದ್ದೇನೆಂದರೆ,—ಸರ್ಕಾರೀ ನೌ ಕರಿಯ ಕೊಟ್ಟಿಯ ಜೂರುಗಳಿಗಾಗಿ ಶಿಕ್ಷಿತರಾದ ಬ್ರಾ

ವರ್ತಮಾನ ಸಂಗ್ರಹ

ದಿವಾಕರನರು ಇದೇ ತಿಂಗಳು ೧೦ನೇ ತಾರೀಖಿ ನಿಂದ ಮೈಸೂರು ಡಿಸ್ಟ್ರಿಕ್ಟಿನ ಮೈಸೂರು, ಮಳವಳ್ಳಿ ಯಡತೊರೆ, ಹುಣಸೂರು, ಹೆಗ್ಗಡದೇವನಕೋಟೆ ತಾಲ್ಲೂಕುಗಳಲ್ಲಿ ಸಂಚಾರನಾಡುವರು.

ಬೆಂಗಳೂರಿನಲ್ಲಿ ಕರ್ಪೂರವನ್ನು ತಯಾರ್‌ಮಾಡು ತ್ತಿರುವರು. ಕೆಲವು ದಿನಗಳಿಂದೀಚೆಗೆ ಹೆಚ್ಚಿಗೆ ಸಂಖ್ಯಾದಿ ಸಬೇಕೆಂಬ ಇಚ್ಛೆಯಿಂದ ಕರ್ಪೂರಕ್ಕೆ ಸಕ್ಕರೆ ಯನ್ನು ಬೆರಸಿ ತಯಾರ್‌ಮಾಡುತ್ತಾರೆ. ಸಕ್ಕರೆಯನ್ನು ಬೆರಸಿ ಕರ್ಪೂರವನ್ನು ಮಾಡುವುದರಿಂದ ಕರ್ಪೂರವು ಉರಿಯುವ ಅರಿವೊಗ್ಗವೆದು ಮತ್ತು ದುರ್ವಾಸನೆ ವುಂಟುವಾಗಿ ಪೂಜೆಗೆ ಅರ್ಹವಲ್ಲ.

ಬೆಳಗಾಂವಿನಲ್ಲಿ ಲಂಚದಕಟ್ಟೆಯಾಗಿ ಆರೋಪಿತ ರಾಗಿದ್ದವರ ವಿಚಾರಣೆಯು ತೀರಿ ಆ|| ಸೆಷನ್ ಜಡ್ಜ್ ವಿ|| ಪಟವರ್ಧನರವರ ಪೋಲೀಸ್ ಸೂಪರಿಂಟೆಂಡೆಂ ಟ್ ಇರಿವಿಂಗ್‌ರವರಿಗೂ, ಪೋಲೀಸ್ ಇನ್‌ಸ್ಪೆಕ್ಟರ್ ಡಬ್ಲ್ಯೂ ಬಿ ಮೋಳೆಯವರಿಗೂ ೨ ವರ್ಷ ಕಠಿಣ ಶಿಕ್ಷೆ ಯನ್ನೂ, ೨೦೦೦ ರೂ. ಜುಲ್ಮಾನೆಯನ್ನೂ ತಪ್ಪಿದರೆ ೬ ತಿಂಗಳ ಕಠಿಣ ಶಿಕ್ಷೆಯನ್ನೂ ಇನ್‌ಸ್ಪೆಕ್ಟರ್ ಎಚ್. ಎ. ಟರ್ನರ್‌ರವರಿಗೂ ಸಂಗಾಡಿ ಸಿದ್ದಗೌಡ ಪಟೇಲ್ ಇವರಿಗೂ ೧ ವರ್ಷ ಕಠಿಣ ಶಿಕ್ಷೆಯೂ ೧೦೦೦ ರೂ ಜುಲ್ಮಾನೆಯನ್ನೂ ತಪ್ಪುದರೆ ಮತ್ತೆ ೩ ಮತ್ತು ೬ ತಿಂಗಳ ಕಠಿಣ ಶಿಕ್ಷೆಯನ್ನೂ, ಸರತಿಂಗ ರಾಮಾಮಿಂಟೆ ಅಪ್ಪಲಾಲ್, ಇದಾಮಗಡಿಗರ, ಧೊಂಡಿ ಬಸಪ್ಪ ಕೋರಿ ಮೋತಿ ಜಂದ್ ಕೃಷ್ಣಾಜುದ್ ಗುಜರ್ ಇವರುಗಳಿಗೆ ತಲಾ ೬ ತಿಂಗಳ ಶಿಕ್ಷೆಯನ್ನೂ ಸ್ಪಧು ಚನ್ನಪ್ಪ ಬೆಳ್ಳಂಕಿ ಇವರಿಗೆ ೧ ತಿಂಗಳ ಕಠಿಣ ಶಿಕ್ಷೆ ಯನ್ನೂ ವಿಧಿಸಿದರು.

ಬ್ರಾಹ್ಮಣರಲ್ಲಿ ಕೆಲವರೂ ಬ್ರಾಹ್ಮಣೇತರರಲ್ಲಿ ಕೆಲವರೂ ಪ್ರ ಯತ್ನ ಸಡುತ್ತಲೇ ಇದ್ದಾರೆ. ಮೈಸೂರಿನ ರಾಜಕೀ ಯ ಪ್ರಪಂಚವೆಲ್ಲಾ ಸರ್ಕಾರಿಯ ನೌಕರಿಯಲ್ಲೇ ಅಡ ಕವಾಗಿರುವುದು, ಸ್ವಾತಂತ್ರ್ಯ ನೌಕರಿಯನ್ನು ದೊರಕಿಸು ಕೊಳ್ಳುವ ಸ್ವಾರ್ಥಕ್ಕೋಸ್ಕರ ಇಲ್ಲದ ಸಲ್ಲದ ಒಗ್ಗ ಸಮ್ಮೆಳ್ಳ ಉಂಟಾಗಿರುವುದು.

ಪ್ರಶ್ನೆ:—ಪತ್ರಿಕಾ ಕರ್ತರ ಯೋಗ್ಯತೆಯನ್ನು ವಿ ಮರ್ಶಿಸುವುದಕ್ಕಾಗಿಯೂ ಅವರಿಗೆ ಪತ್ರಿಕೆಗಳನ್ನು ಹೊ ರಡಿಸುವುದಕ್ಕೆ ಲೈಸೆನ್ಸು ಕೊಡುವುದಕ್ಕಾಗಿಯೂ ಪ ತ್ರಿಕಾ ಕರ್ತರ ಸಂಘವೊಂದು ಇರಬೇಕೆಂದು ಒಪ್ಪುವಿ ರೋ ?

ಉತ್ತರ—ಹೌದುಬಂತ ಹೇಳಿದರೆ ಎಲ್ಲವನ್ನೂ ಬಿಟ್ಟ ಹಾಗೆಯೇ ಆಯಿತು.

ಪ್ರಶ್ನೆ:—ಪತ್ರಿಕೆಳ ಪತೋಟಿಗಾಗಿ ಜರ್ನಾ, ಆ ಜೇರಿಕಾ, ಇಂಗ್ಲೆಂಡಗಳಲ್ಲಿ ಯಾವ್ಯದಾದರೂ ಕಾನೂ ನುಗಳಿದಿಯೋ ?

ಉತ್ತರ;—ಪತ್ರಿಕೆಗಳ ಹತೋಟಿಗಾಗಿ ಕಾನೂ ನುಗಳೇನೋ ಇದೆ. ಆದರೆ ಅದು ಯಾವತೆಂದ ಕಾನೂ ನು ಎಂಬುದು ಮುಖ್ಯ ಪ್ರಶ್ನೆ. ಆಗ್ಟ್ 20 ನೇ ತಾರೀ ಖಿನ ಅನಂತರ ಎಲ್ಲೆಲ್ಲೂ ಕೋರಾಪಲದ ಸಮಾಚಾರಗಳು ಬರುತ್ತಿದ್ದವು.

TAI NADU
12—11—1928

ದಿವಾನರನ್ನು ಏತಕ್ಕೆ ಪರೀಕ್ಷಿಸಲಿಲ್ಲ?

ವಿಶ್ವೇಶ್ವರಯ್ಯ ಕಮಿಟಿಯವರು ಕನ್ನಡ ಕೆಲಸವನ್ನು ಅರ್ಧಾಂತಕ ಮಾಡಿದಹಾಗೆ ಕಾಣುತ್ತದೆ. ಇನ್ನೂ ಪರೀಕ್ಷೆ ಸಲ್ಪಡಕ್ಕವರು ಅನೇಕರಿದ್ದರು. ಬೆಂಗಳೂರಿನ ಗಲಭೆಗೆ ಸರ್ಕಾರದ ಜವಾಬ್ದಾರಿಯು ಇಲ್ಲವರು. ದಿವಾನರು ಹಾಗೆ ಹೇಳಿದರು, ಹೀಗೆ ಹೇಳಿದರು ಎಂದು ಅನೇಕ ಜವಾಬ್ದಾರೀ ಇಲ್ಲದ ಜನಗಳು ಹೇಳಿಕೆಯನ್ನು ಕೊಟ್ಟರು. ಗುಂಡು ಹೊಡೆದದ್ದು ಸುಳ್ಳೆಂದು ಪ್ರಕಟಿಗಳನ್ನು ಹೊರಡಿಸಿದ ವಿಷಯದಲ್ಲಿ ಸರ್ಕಾರದ ಜವಾಬ್ದಾರಿಯು ಯೆಷ್ಟಾಗಿರುವುದು. ಈ ವಿಷಯವಾಗಿ ಫೀಲ್ಡ್ ಸೈಪ್ರೆಂಗಳನ್ನೂ ಪೊಲೀಸಿಟಿ ಆಫೀಸರನ್ನೂ ಪರೀಕ್ಷಿಸಬೇಕಾಗಿತ್ತು. ಅದಿರಲಿ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರನ್ನು ನೇಮಿಸಿದ ವಿಷಯವಾಗಿಯೂ ಸರ್ಕಾರನ್ನು ಪರೀಕ್ಷಿಸಬೇಕಾಗಿತ್ತು. ದಿವಾನರು ತಾವೇ ಕಮಿಟಿಗೆ ಒಂದು ಕಮ್ಮಿಮೇರಿರುವ ಆಪಾದನೆಗೆ ಉತ್ತರರಾಗಿ ಒಂದು ನಾಂಗ್ಮೊಲನನ್ನು ಕೊಟ್ಟಿದ್ದರೆ ಎಷ್ಟು ಶೋಭಿಸುತ್ತಿತ್ತು? ಪ್ರಯೋಜನವೇನು? ಕಮಿಟಿಯು ಎರಡೂವರೆ ತಿಂಗಳು ಕೂತೂ, ಪ್ರಧಾನರಾದವರನ್ನು ಪರೀಕ್ಷಿಸಲಿಲ್ಲ. ಕಮಿಟಿಯವರಿಗೆ ಏನೇನು ಕಷ್ಟಗಳಿದ್ದವೋ? ಯಾರಿಗೇನುಗೊತ್ತು? ಬೆಂಗಳೂರು ಗಲಭೆಗೆ ಏನೂ ಸಂಬಂಧವಿಲ್ಲದ ಒಬ್ಬ ಮೈಲಿ ದೂರದಲ್ಲಿದ್ದ ಮಹಮದೀಯ ಸಜ್ಜನರೂ ಎಚ್. ಸಿ. ದಾಸಪ್ಪನವರೂ ಪಡಪೋಸಿಗಳೂ ಇನ್ನೂ ಇತರರೂ ಸಾಕ್ಷಿ ಕೊಡುವುದೂಂತೇ! ಪ್ರತ್ಯಕ್ಷವಾಗಿ ಸಂಬಂಧವಿದ್ದ ದಿವಾನರೂ ಎಗ್ಸಿಕ್ಯೂಟಿವ್ ಕೌನ್ಸಿಲರ್‌ಗಳೂ, ಪೊಲೀಸರುಗಳೂ ಸಾಕ್ಷಿ ಕೊಡುವ ಅವಶ್ಯಕತೆ ಕಮಿಟಿಯವರೇ! ಪ್ರಪಂಚದ ನ್ಯಾಯವೇ ಒಂದಾದರೆ ಮೈಸೂರಿನ ನ್ಯಾಯವೇ ಒಂದು ಎನಾದರಿ. ಇಲ್ಲದೆ ಹೋದರೆ ಮೈಸೂರಿಗೆ ಮಾದರೀ ಸಂಸ್ಥಾನವೆಂಬ ಹೆಸರು ಹೇಗೆ ಸಲ್ಲೀತು?

ಗೌರ್ನಮೆಂಟ್ ಆಯುರ್ವೇದಿಕ್ ಮತ್ತು
ಯುನಾನಿ ಕಾಲೇಜು, ಮೈಸೂರು.

೧೯೨೮ ನೇ ಸಪ್ಟೆಂಬರ್ ತಾ|| ೧೮ ನೇ ಭಾನುವಾರ ಸಾಯಂಕಾಲ ೪ ಗಂಟೆಗೆ ನಮಯಾಗಿ ಟೌನ್‌ಹಾಲಿನಲ್ಲಿ "ಕಾವೇರಮ್ಮ" ಸುಮೋಕ್ಷವನ್ನು ನಮಸ್ಕರಿಸುತ್ತಿದೆ. ಆ ಕಾಲದಲ್ಲಿ ಮೈಸೂರು ಗೌರ್ನಮೆಂಟ್ ಮುಜರಾಯಿ ಕಮಿಷನರರಾದ ಬಿ|| ಪಿ. ಜಿ. ನರಸಿಂಹಾ ಕಾಲೇಜಿನವರ ಅಭ್ಯಕ್ಷತೆಯಲ್ಲಿ ಮದ್ರಾಸ್ ಸ್ಕೂಲ್ ಆಫ್ ಇಂಡಿಯಲ್ ಮೆಡಿಸಿನ್ ಪ್ರಿನ್ಸಿಪಾಲರಾದ ಕ್ಯಾಪ್ಟನ್ ಜಿ. ಶ್ರೀನಿವಾಸಮೂರ್ತಿಯವರು ಆಯುರ್ವೇದ ಮತ್ತು ಯುನಾನಿ ಆಫೀಸ್ಟ್ಯಿಯಲ್ ಪ್ರಾಕ್ಟೀಸಾಗಿ ಉಪನ್ಯಾಸವನ್ನು ಮಾಡಿತ್ತಾರೆ.

ಪೌಲಕತಾಲಿಯವರ ರೋಷಾವೇಶ ಭಾಷಣ

ಪೌಲಕತಾಲಿಯವರು ಸಂಯುಕ್ತ ಸ್ವಾಂಶ್ಯದ ಮಹಮದೀಯ ನಮ್ಮೇಳನದ ಅಭ್ಯಕ್ಷರಾಗಿ ಮಾಡಿದ ಭಾಷಣವು ಒಳ್ಳೆ ಕೋಪತಾಪಗಳಿಂದ ಕೂಡಿರುವುದು. 1920-21 ರಲ್ಲಿ ಮಹಾತ್ಮಾಗಾಂಧಿಯವರಿಗೆ ಬಲಗು ಒದಾಗಿದ್ದುಕೊಂಡು ಇವರು ಮಾಡಿದ ದೇಶಸೇವೆಯು ಚಿರಸ್ಮರಣೀಯವಾದುದು. ಹಿಂದೂಗಳು ಮಹಮದೀಯರು ಎಂಬ ಭೇದವಿಲ್ಲದೆ ಭಾರತೀಯರೆಲ್ಲರೂ ಇವರನ್ನು ದೊಡ್ಡಣ್ಣ ಎಂದು ಆದರಿಸಿದರು. ಇಂಥವನಿಗೂ ಕೂಡ ಈಚೀಗೆ ಮನೋವಿಕಲ್ಪವು ಉಂಟಾಗಿ ಹಿಂದೂಗಳಿಗೂ ಮಹಮದೀಯರಿಗೂ ವೈಷಾಸೂಯಿಯನ್ನು ಹೆಚ್ಚಿಸುವ ಭಾಷಣವನ್ನು ಮಾಡುತ್ತಿರುವುದನ್ನು ನೋಡಿದರೆ ಸಮಗೆ ಒಳ್ಳೆ ಆಘಾತವಾಗುತ್ತದೆ. ಪೌಲಕತಾಲಿಯವರು ಹೇಳಿರುವುದೇನೆಂದರೆ:- 1920-21 ರಲ್ಲಿ ಮಹಮದೀಯರು ಅದ್ಭುತವಾದ ಸ್ವಾರ್ಥತ್ಯಾಗವನ್ನು ಮಾಡಿದರು. ನೆಲದ ಮೇಲೆ ವಿಳಕ್ಕುತ್ತಿದ್ದ ರಾಷ್ಟ್ರೀಯ ಸಭೆಯು ಇನ್ನಿಲ್ಲದಂತೆ ಮಾಡಿದರು. ರಾಷ್ಟ್ರೀಯ ನಿಧಿಗೆ ೮೦ ಲಕ್ಷ ರೂಪಾಯಿ ಚಂದಾವನ್ನು ಕೊಟ್ಟರು. ಸಂಪೂರ್ಣ ಇಸ್ಲಿದೆ ಮಹಮದೀಯರು ಬೈಲನ್ನು ಹೊಕ್ಕರು. ಇಂಡಿಪೆಂಡೆಂಟ್ ಮೊದಲಾದ ರಾಷ್ಟ್ರೀಯ ಪತ್ರಿಕೆಗಳು ಮಹಮದೀಯರ ಚಂದಾಹಣದಿಂದಲೆ ನಡೆದವು ಮಹಾತ್ಮಾಗಾಂಧಿಯವರು ಮಹಮದೀಯರ ದ್ರವ್ಯ ಸಹಾಯದಿಂದಲೇ ಇಂಡಿಯಾ ದೇಶವನ್ನೆಲ್ಲಾ ಸುತ್ತಿ ಪ್ರಚಾರ ಮಾಡಿದರು. ಆ ಸ್ಥಿತಿಯೆಲ್ಲಾ ಈಗಾಯಿತಲ್ಲಾ ಎಂದು ಹೋಜಿಸಿ ಹಿಂದೂಗಳಿಗೂ ಮಹಮದೀಯರಿಗೂ ವೈಮನಸ್ಯವು ವಿಕಸಿಸಿರಿತು.

ಮಹಮದೀಯರು ಇಂಡಿಯಾ ದೇಶದ ಸ್ವಭಾಗಳಾಗಿ ಅವ್ಯಾಹತವಾದ ಶಕ್ತಿಯು ಅವರಲ್ಲಿ ಇದ್ದಾಗ್ಯೂ ಹಿಂದೂ ಒನಾಂಗನನ್ನೆಲ್ಲಾ ಅಳಿಸಿ ಬಿಡಬಹುದಾಗಿತ್ತು. ಸ್ಮಿರಲರನ್ನು ಹಿಂಸೆಮಾಡಕೂಡದೆಂಬುದೇ ಮಹಮದೀಯರ ಸಿದ್ಧಾಂತ. ಹಿಂದೂಗಳು ಒಂದು ಮಾತನ್ನು ನೆನಪಿಸಲ್ಲಡಲಿ. ಏನೇ ಆಗಲಿ, ಮಹಮದೀಯರನ್ನು ಒಗ್ಗಿಸುವುದಕ್ಕಾಗುವುದಿಲ್ಲ. ಸ್ವಭಾವವಾಗಿ ಮಹಮದೀಯರು ದೈರ್ಯಶಾಲಿಗಳು. ಇನ್ನೊಬ್ಬರಿಗೆ ಬಗ್ಗತಕ್ಕವರಲ್ಲ. ಹಿಂದೂಗಳಿಗೆ ಗುಲಾಮಗಿರಿಯ ಅಭ್ಯಾಸವೆ ಚೆನ್ನಾಗಿ ಇದೆ. ಇನ್ನು ಎಷ್ಟು ದಿವಸ ಬೇಕಾದರೂ ಹಿಂದೂಗಳು ಗುಲಾಮಗಿರಿಯಲ್ಲಿ ಇರುವರು. ಆದರೆ ಮಹಮದೀಯರು ಸ್ವಾತಂತ್ರ್ಯಪ್ರಿಯರು. ಅವರು ಹಿಂದೂ ಪ್ರಭುತ್ವಕ್ಕಾಗಲೀ ಪಂಗಿಯವರ ಪ್ರಭುತ್ವಕ್ಕಾಗಲೀ ತಲೆಯನ್ನು ಬಾಗುವುದಿಲ್ಲ. ಹಿಂದೂಗಳು ಹೇಳಲಿ. ಅವರಿಗೆ ಶಕ್ತಿಯಿಲ್ಲ ಬೇಕೋ? ಯುದ್ಧವು ಬೇಕೋ? ಯುದ್ಧವು ಬೇಕಾದರೆ ಸಿದ್ಧವಾಗಲಿ. ಬಿಂದೂಗಳ ಮಹಾಪೀಡೆಗಳಾಗಲೀ, ಅವಾಹಗಳಾಗಲೀ ಮಹಮದೀಯರ ಮುಂದೆ ಬೇಯುವುದಿಲ್ಲ. ಮಹಮದೀಯರು ಆಗರ್ಭಕ್ಷತ್ರಿಯರು. ಅವರು ಯಾವಾಗಲೂ ಜಯಶೀಲರಾಗುವರು. ಶಾಂತಿಯು ಬೇಕಾದರೆ ದಾಸಿಯು ಬೇರೆ. ಸಹಜ ಕಮಿಟಿಯು ವರದಿಯಲ್ಲಿ ಮಹಮದೀಯರಿಗೆ ಜಾತಿವಾರುಪ್ರಾತಿನಿಧ್ಯವು ದೊರೆಯುವ ಏರ್ಪಾಡುಮಾಡಲ್ಪಡಲಿ. ಇಲ್ಲವಾದರೆ ಮಹಮದೀಯರು ತಮ್ಮ ಸ್ವಯತ್ನವನ್ನು ಸ್ವಲ್ಪವೂ ವಿಫಲ ಮಾಡದೆ ತತ್ಸಂರಕ್ಷಣೆಗೆ ಸಿದ್ಧರಾಗಬೇಕಾಗುವುದು.'

ವಿವಿಧ ವಿಷಯಗಳು.

ಒಳ್ಳೆ ಪೇಟೆ ಬೋರ್ಡು

ಮಾ|| ಜಿ. ಭೀಮರಾಯರ ಒಳ್ಳೆಪೇಟೆ ಪ್ರಾಸಗ್ಯಾಂದ ಬೋರ್ಡಿಗೆ ಪೋಲೀಸಿನವರು ಆಶಂಕವನ್ನುಂಟುಮಾಡುತ್ತಿಧಾನೆಂದು ನಮ್ಮ ಒರ.

ವೀರಕೇಸರಿ

ವೀರಕೇಸರಿ ಪತ್ರಿಕೆಯು ಈಗ ಪುನಃ ಹೊರಡಲಾರಂಭವಾಗಿದೆ. ಪ್ರತ್ಯೇಕವಾಗಿಯೊಂದು ಮುದ್ರಣಾಲಯವನ್ನು ಏರ್ಪಡಿಸಿ, ಈ ತಿಂಗಳು ೧೯ ನೇ ತಾರೀಖು ಬುಧವಾರದಿಂದ ಆ ಮುದ್ರಣಾಲಯದಲ್ಲಿ ವೀರಕೇಸರಿಯು ಪ್ರಕಟಿಸಲ್ಪಡುತ್ತದೆ ವೀರಕೇಸರಿಯಲ್ಲಿ ದೇಶದೇತಗಳ ತಂತೀ ಸಮಾಚಾರಗಳನ್ನು ಪ್ರಕಟಿಸಲು ಸಂಕಲ್ಪಮಾಡಲ್ಪಟ್ಟಿದೆ. ಮಹಾಜನರ ಪ್ರೋತ್ಸಾಹದೆಯಿಂದ ೧೯೩೮-೨೯ ರಿಂದ ತಂತೀ ಸಮಾಚಾರಗಳು ಪ್ರಕಟಿಸಲ್ಪಡುತ್ತವೆ. ವೀರಕೇಸರಿಯು ವಾರ ಪತ್ರಿಕೆಯು ಇದೇ ೧೯ ನೇ ತಾರೀಖು ಬುಧವಾರ ಪ್ರಕಟಿಸಲ್ಪಡುವುದು, ಎಂದು ಈ ತಿಂಗಳು ೮ ನೇ ತಾರೀಖಿನ ವೀರಕೇಸರಿ ಪತ್ರಿಕೆಯಲ್ಲಿ ಪ್ರಕಟವಾಗಿರುವುದು.

ಸ್ವಾಮೀ ನಾಳು ಮತ್ತು ಕೋಮುವಾರು ಪ್ರಾತಿನಿಧ್ಯ

ಸೈಮನ್ ಕಮೀಷನ್ನರ ಮುಂದೆ ಸರ್. ಎಂ. ಪುರುಷೋತ್ತಮರವರು ಈ ವಿಷಯವಾಗಿ ಒಂದು ಅಭಿಪ್ರಾಯವನ್ನು ಕೊಟ್ಟರು. ಅದೇನೆಂದರೆ—ಜೀವಿಸಿ ಸರ್ಕಾರಿ ನೌಕರಿಗಳಲ್ಲಿ ಮುಂಬಡಿ ಬಡಿಹಾಗದನ್ನು ಉದ್ದೇಶಿಸಿರುವ ಯೋಗ್ಯತೆಯನ್ನೇಲ್ಲಾ ಮೂರನ ಒಂದು ಭಾಗವನ್ನು ಸ್ವಾತಿನಿಧ್ಯವು ಪೊರಕವೆ ಇರುವ ಕೋಮಿನ ಉದ್ಯೋಗಕ್ಕೂ ಕೊಡಬೇಕೆಂದು ಇಂಡಿಯಾ ಸರ್ಕಾರದಲ್ಲಿ ವಿಧಾಯಕವಾಗಿದೆ. ಈ ಸೀತಿಗೆ ನಾನೇ ಬಾಬ್ಬಾದನು." ಮೈಸೂರಿನಲ್ಲಿ ಸ್ಥಿತಿಗತಿಗಳು ಇದಕ್ಕೆ ವಿಪರೀತವಾಗಿವೆ. ಸರ್ಕಾರದ ನೌಕರಿಯಲ್ಲಿ ನಾಲ್ಕನೆ ಮೂರು ಭಾಗವು ಜಾತಿಯ ಮೇಲೆಯೂ ನಾಲ್ಕನೆ ಒಂದು ಭಾಗವು ಯೋಗ್ಯತೆಯ ಮೇಲೆಯೂ ನಿರ್ಧರಿಸಲ್ಪಡುವುದು. ಮೈಸೂರು ಸರ್ಕಾರದವರೂ ಇಂಡಿಯ ಸರ್ಕಾರದವರ ರೀತಿಯನ್ನು ಏತಕ್ಕೆ ಅವಲಂಬಿಸಕೂಡದೆಂಬುದು ಸಾಮಾನ್ಯ ಪ್ರಶ್ನೆ.

ಕಾದಬೆ ಎಂಬ ಕನ್ನಡ, ಹುಡುಗಿಯು ತನ್ನ ಗಂಡನ ಮನೆಯಿಂದ ಒಬ್ಬ ಸಾಧು ಒತೆಯಲ್ಲಿ ಹೊರಟಳೆಂದೂ ಈ ಸಾಧುವು ಕೈಸ್ತ ಮಿಶನ್ನಿಗನರಲ್ಲಿದ್ದನೆಂದೂ ಹುಡುಗಿಯು ಮಂಗಳಸೂತ್ರವನ್ನು ಕೆತ್ತಿರುವಳೆಂದೂ ಅವಳನ್ನು ಮಿಶನರಿಗಳು ಕ್ರೈಸ್ತಮತಕ್ಕೆ ಸೇರಿಸುವರೆಂದೂ ಸತಾರಾ ಅಪ್ಪೀಲಾವ್ ಎಂಬುವರು ಅರಾವಲಿ (ಬೊಂಬಾಯಿ) ಕೋರ್ಟಿನಲ್ಲಿ ಫಿರ್ಯಾದು ಮಾಡಿರುವರು. ಜಾಯಕಲ್ಲಾದಲ್ಲಿರುವ ಚರ್ಚಮಿಶನ್ನಿನವರಲ್ಲಿ ಈಕ ಬಾಲೆಯು. ಗಣಪತಿರಾವ ನುರಿಬಾವ ಎಂಬಾತನೆ ಇವಳನ್ನು ಪುಸಲಾಯಿಸಿದ ಸಾಧುವಂತೆ.

ನೆಲ್ಲೂರಿನಲ್ಲೊಬ್ಬ ಹಿಂದೂವಿಧವೆಯು ತನ್ನ ೧೨ ನೇ ವಯಸ್ಸಿನಲ್ಲಿ ಮಡಿದಳು. ಆವಳ ಮಗನ ವಯಸ್ಸು ೧೦೦ ನ್ನು ವಿಾರಿದೆ.

Regd. No. M. 2322 ‖ ವಂದೇ ಮಾತರಂ ‖ ಬಿಡಿ ಪ್ರತಿ ೧ ಪೈ

ತಾಯಿನಾಡು.

ಪ್ರತಿ ದಿನವೂ ಮೈಸೂರಿನಲ್ಲಿ ಪ್ರಕಟವಾಗುವುದು

ಸಂಪಾದಕ· ಸುಖ ದುಃಖೇ ಸಮೇಕೃತ್ವಾ ಲಾಭಾಲಾಭೌ ಜಯಾಜಯೌ ।
ಪಿ. ಆರ್. ರಾಮಯ್ಯ ತತೋ ಯುದ್ಧಾಯ ಯುಜ್ಯಸ್ವ ನೈವಂ ಪಾಪಮವಾಪ್ಸ್ಯಸಿ ॥ ಗೀತಾ ॥

ವಾರ್ಷಿಕ ಚಂದಾ { ಸ್ಥಳಕ್ಕೆ ೪-೦-೦ / ಪರಸ್ಥಳಕ್ಕೆ ೧೦೦-೦

ಕಂಪುಟ ೧] ಸೋಮವಾರ ೧೨ ನವಂಬರ್ ೧೯೨೮ [ಸಂಚಿಕೆ ೪೦

ನಿಮ್ಮ ಆರೋಗ್ಯದ ಸೂರ್ಗವು ಅಮೃತಾಂಜನದಲ್ಲಿರುವುದು

ಎಲ್ಲಾ ನೋವುಗಳೂ ಅಮೃತಾಂಜನದಿಂದ ಗುಣವಾಗುತ್ತಿರುವುದು

ತಲೆನೋವು — ಕೆಮ್ಮು
ವಾತಶೂಲೆ — ನೆಗಡಿ
ಬೆನ್ನು ನೋವು — ಕುಟ್ಟ ಘಾಯ
ಕಟಿಶೂಲೆ — ಹುಣ್ಣುಗಳು
ಪಾರ್ಶ್ವವಾಯು — ಉಳುಕಿದ ನೋವು

ಅಮೃತಾಂಜನ ಡಿಪೋ

ಸುದರಾನು. ಬೊಂಬಾಯಿ.

ಪಹ ! ಹ!! ನಾಖಮೇ ನಾಖ !!!

ನಿಮಗೆ ಟಾನಿಕ್ ಬೇಕಾಗಿದೆಯೋ ? ಹಾಗಾದರೆ ಲೋಕಪ್ರಸಿದ್ಧವಾಗಿರುವ

ಆತಂಕನಿಗ್ರಹ ಮಾತ್ರೆಗಳನ್ನೇ

ಉಪಯೋಗಿಸಿರಿ

ಏತಕ್ಕೆಂದರೆ ಇವೇ ಈಗಿನ ಟಾನಿಕ್‌ಗಳೆಲ್ಲೆಲ್ಲಾ ಉತ್ತಮವಾದವು. ಕ್ರಯ ಡಬ್ಬಿ 1 ಕ್ಕೆ 1-0-0

ಈ ವಿಜಸ್ಥಳಗಳಲ್ಲಿ ನಮ್ಮ ಔಷಧಗಳು ದೊರೆಯುತ್ತವೆ. ಆತಂಕ ನಿಗ್ರಹ ಔಷಧಾಲಯ

ಮೈಸೂರು, ಶಂಕರಪುರ, ಬಾವಹಗೆರೆ, ಶಿವಮೊಗ್ಗ, ಹಾಸನ, ಚಿತ್ರದುರ್ಗ. ಚಿಕ್ಕಪೇಟೆ, ಬೆಂಗಳೂರು ಸಿಟಿ.

ಮಕ್ಕಳ ಆರೋಗ್ಯವೇ ತಂದೆತಾಯಿಗಳ ಭಾಗ್ಯವಲ್ಲವೆ?

ಈ ಎರಡು ಕುಟುಂಬರತ್ನಗಳನ್ನು ನಿಮ್ಮೀಪದಲ್ಲಿರಿಸಿಕೊಂಡಿರಿ.

ಸರ್ವ ವೈದ್ಯನೋಪಾದಿಯಲ್ಲಿ ಸಮಸ್ತ ರೋಗಗಳನ್ನೂ ಪರಿಹರಿಸುತ್ತದೆ.

ಬಾಲಸಂಜೀವಿನಿ:—ಮಕ್ಕಳಿಗೆ ೧-೨ ವೇಳೆ ಸುಖವಾಗಿ ಭೇದಿಮಾಡಿಸಿ ಸಮಸ್ತ ವಿಧ ಜ್ವರ, ಅಜೀರ್ಣ ವಾಯುಗ
ನ್ನೂ ಪರಿಹರಿಸುತ್ತದೆ. 50 ಮಾತ್ರೆ 4 ಆಣೆ

ಶ್ರೀಕರ ಕಸ್ತೂರಿಮಾತ್ರೆ:—ಳ ಮುಳ್ಳು ಮುಟ್ಟುವ ಸುವಾಸನೆಯುಳ್ಳ ಈ ಮಾತ್ರೆಗಳನ್ನು ತಾಂಬೂಲದೊಡನೆ ಸೇವಿ
ಸುತ್ತಿರಲ್ಲಾ ಹವಾಗಳಲ್ಲೂ ಎಲ್ಲಾ ದೇಶಗಳಲ್ಲೂ ಶರೀರದ ಆರೋಗ್ಯವನ್ನು ಕಾಪಾಡುತ್ತದೆ. ಮುಕ್ಕಳ ಮತ್ತು ದೊಡ್ಡವರ
ಕೆಮ್ಮು, ನೆಗಡಿ, ಜ್ವರ, ಹಲ್ಲುನೋವು ಶೀತವಾಯು, ಪ್ಲೇಗು ಇನ್ಫ್ಲುಯೆನ್ಜ, ಕಾಲಾ ಮು ಕಾಪ್ಪಸ ಪಾತರಿ ಗುಣಪಡಿ
ಸುತ್ತದೆ ಸ್ವತಮಸೆಗಳಲ್ಲಾ ಅತ್ಯವಶ್ಯಕ ಇಂಬೇಕಾದದ್ದು. ಬೆಲೆ ಸೀಸೆ 1 ಕ್ಕೆ 4 ಆಣೆ

ಬಿಸಿಲುಕಾಲಕ್ಕೆ ಅನುಕೂಲವಾದ ಶೈಲ ಪರಬತ್ತು, ಲೇಹಗಳು ಸಿದ್ಧವಾಗಿವೆ.

ಆಯುರ್ವೇದ ವಿದ್ವಾ ಭಿಷಗ್ರತ್ನ ಬಿ. ವಿ. ವೆಂಡಿತರು,
ಸದ್ವೈದ್ಯಶಾಲಾ, ಸಂಜನಗೂಡು.

ತಾಯಿ ನಾಡು.

(ಪ್ರಜಾಹಿತವನ್ನು ಸ್ತುತಿಪಾದಿಸುವ ಪತ್ರಿಕೆ.)

ವಂದೇಮಾತರಂ ಲಾಡ್ಜ್ ಮೈಸೂರು.

To Let

TAI NADU (Daily Edition.)

The Leading Nationalist Daily of Mysore.

ಎಂ.ಎಸ್. ಸಿದ್ದಪ್ಪ & ಬ್ರದರ್ಸ್

ಹಾರ್ಡ್‌ವೇರ್ ಮರ್ಚೆಂಟ್ಸ್ ಮತ್ತು ವ್ಯಾಪಾರಿಗಳು, ಮೈಸೂರು.

ಎಂ. ಎಸ್. ಸಿದ್ದಪ್ಪ ಬ್ರದರ್ಸ್‌ರವರು ಉತ್ತಮವಾದ ಹಾರ್ಡ್‌ವೇರ್ ಸಾಮಾನುಗಳನ್ನು ಸಗಟು ಮತ್ತು ಚಿಲ್ಲರೆಯಾಗಿ ತಿಂಗಳು ಗಟ್ಟಲೆ ಅರಸಾಣ ಸಹಾ ಯಾರಿಗಾದರೂ ಬೇಕಾದರೂ ಸಪ್ಲೈ ಮಾಡುವ ಕಾಂಟ್ರಾಕ್ಟಿನ ಮೇಲೆ ಪ್ರೈಸ್ ಲಿಸ್ಟನ್ನು ಸದರಿ ಆಸಾಮಿಗಳಿಗೆ ಪೈಸೆ 1 ಕ್ಕೆ 0—8—0 ಮೇರೆ ಬೆಳೆಗೆ ಇಟ್ಟಿದ್ದಾರೆ. ನಮ್ಮ ಹೆಸರು ವಿಲಾಸಪುರ ರಬ್ಬರ್ ಮೊಹರು ಪಟ್ಟಿಯ ಮಿಗೆ ಪರಿಚಾರಿಗಳ ಕ್ಯಾಟಲಾಗಿಗೆ ಅರಿಯುವ ವಿಳಾಸ— ಎಂ. ಎಸ್. ಸಿದ್ದಪ್ಪ ಬ್ರದರ್ಸ್. ಹಾರ್ಡ್‌ವೇರಿಯಂ ವ್ಯಾಪಾರಿಗಳು, ಮೈಸೂರು.

"ಭಗವತ್ಕೃಪ"

ಪಾಳ್ಯದ ವೆಂಕಟಾಚಲಪಂಡಿತರ

ಆಯುರ್ವೇದೀಯ ನಿರ್ಬಂಧಿಗಳು.

ಬೇಧ ಬಳಕೆ ಹೊಡಾಡುವದಕ್ಕಿಂತ ರೋಗವು ಬಾರದಂತೆ ಮಾಡಿಕೊಳ್ಳುವ ಸಹೇತ್ಯವಾದ ಉಪಾಯವು ಲೋಕಾಮಯಪೀಡಿತ ಕುಟುಂಬ ಮಾತ್ರೆಗಳಿಂದು ನಿಮ್ಮ ನೆನಪಿನಲ್ಲಿರಲಿ.

ಪ್ರತಿ ದಿನ ತಾಂಬೂಲವೊದವಾಗಲಿ, ಹಾಗೆ ಆಗದೆ ೧—೨ ನ್ನು ಸಂಪಾದಿಸಿದ್ದರೆ ಜೀರ್ಣಶಕ್ತಿಯನ್ನು ಹೆಚ್ಚಿಸಿ ಗಾಳಿ ಮತ್ತು ಸೀರುಗಳ ಕಡಿತವನ್ನು ಅಂಟುಗೊಡದೆ ಕಾಪಾಡುತ್ತದೆ.

ಮಕ್ಕಳ ಎಳವೆ, ನೆಗಡಿ, ಕೆಮ್ಮುಲು, ಸೀತವಾತ ಜ್ವರ, ಚರ್ಮದ ಅಜೀರ್ಣದ ಪೀಡಿ, ಅಗ್ನಿಮಾಂದ್ಯ, ಹೊಟ್ಟೆಯುಬ್ಬರ ಮಂಜಿದ್ದ, ಪ್ಲೇಗು ಜ್ವರ, ಅನ್ನಪ್ಲುಯೆಂಜ, ರಕ್ತಹೀನತೆ, ದುರ್ಬಲ ಇವುಗಳನ್ನು, ಪೆಡ್ಡವರ ಜ್ವರ, ಚಳಿಜ್ವರ, ಕೆಮ್ಮುಲು ತಾಲು, ನೆಗಡಿ, ಅಜೀರ್ಣದ ಹೊಟ್ಟೆನೋವು, ಶೀತವಾತಗಳಿಂದ ಸಂದುಗಾಲುಹಿಡಿದ ಮಲಬದ್ಧ ಹಾವಿಲ್ಲದಿರುವಿಕೆ, ಜಲೋದರತೆ ಇನ್ನೂ ಅನೇಕ ರೋಗಗಳನ್ನು ಗುಣಪಡಿಸುತ್ತದೆ.

ಬಾಣಂತಿಯರಿಗೆ ಕಸ್ತೂರಿಗೆ ಬದಲಾಗಿ ಈ ಮಾತ್ರೆಗಳು ಸಂಜೀವನ ವ್ಯಾಯಾಮವನ್ನು ಮಾಡಲುವಕಾಶವಿಲ್ಲದವರಿಗೂ ಗೋಪಾಸ್ತ್ರೀಯರಿಗೂ ಅರೋಗ್ಯವರ್ಧನಕಾರಿ.

250 ರಿಂದ 300 ಮಾತ್ರೆಗಳವರೆವಿಗಿರುವ ಸೀಸೆ 1 ಕ್ಕೆ 0—4—0 ಮೇರೆ ಎಲ್ಲಾ ಅಂಗಡಿಗಳಲ್ಲಿಯೂ ದೊರೆಯುತ್ತವೆ. ಟಪಾಲು ಖರ್ಚು ಸೇರಿ 1 ಸೀಸೆಗೆ 8 ಆಣೆ, 6 ಕ್ಕೆ 1—0—0 ರೂಪಾಯಿ. 12 ಕ್ಕೆ 2—13—0 ರೂಪಾಯಿ 25 ಕ್ಕೆ 5—3—0.

ಶ್ರೀ ಸೀತಾರಾಮವೈದ್ಯಶಾಲಾ,
ಬ್ರಾಂಚ್ ಆಫೀಸು
ಚಿಕ್ಕಪೇಟೆ ಬೆಂಗಳೂರು ಸಿಟಿ.

ಭಗವತ್ಕೃಪ
ಪಾಳ್ಯದ ವೆಂಕಟಾಚಲಪಂಡಿತರ,
ಶ್ರೀ ಸೀತಾರಾಮವೈದ್ಯಶಾಲಾ,
ಹೆಡ್ ಆಫೀಸು ಮೈಸೂರು.

Our Agents

Copies of Tai Nadu, Daily and Weekly are available for sale at the following places:—

1 N. P. Venkatappa & Co
Excelsior Type-writing Institute, Balepet, Bangalore City.

2 Koppada Ramakrishnaiah, Agent, Hassan.

3 Siddiah, Sri Nanjundeswara Bank Ltd Nanjangud.

4 M. N. S & Sons, Lansdowne Buildings. Mysore.

5 B V Pundit & Co, Lakshmivilas Road, Mysore.

6 Friends' Union, Mysore.

7SMt eweart, Lansdowne Buildings, Mysore.



For High Class Jeweller; Silver Ware and othe presentation novelties, plea consult and buy from

Sri Lakshmi Venkateswara & Co
Manufacturing Jewellers, Nagarthpet,
Bangaloie City.

WANTED.

Wanted Candidates for Telegraph and Statio Master's Classes. Full particulars and Railway Far Certificate on 2 annas stamp.

Apply to:—
Imperial Telegraph College,
Nai Sarak, Delh

To Let

Printed and published by P. R. Ramaiya at Sri Rama Press, D. Subbiah Road, Mysore.

ತಾಯಿನಾಡು
10—11—1928

ಅಸೆಂಬ್ಲಿ

ಒಂದು ಸಂವಾದ.

(ಸ್ಥಳರಾಜಧಾನಿಯ ಸಿಟಾರಾಜಾಗ.)

ಚಂದ್ರಶೇಖರಯ್ಯ;— ಏನ್ರಿ ಕಾಮಣ್ಣೋರೇ ಈ ಸಲ ಅಸೆಂಬ್ಲಿ ಹೇಗಿತ್ತು?

ಕಾಮಣ್ಣೋರು;—ತಮ್ಮ ಸರಿಗೆ ರುಮಾಲನ್ನು ಕಳಗೆ ಕೆಡಿವಿಟ್ಟು ಬೆವರನ್ನು ಒರಸಿಕ್ಕೊಂಡು ನಕ್ಕವನ್ನ ಏರಿಸಿ ಅಂದರು.

ಚಂ;—ಅಸೆಂಬ್ಲಿ ಹೇಗಿತ್ತ್ರೀ?

ಕಾ,—ಹೇಗಿತ್ತೇನು? ನಿಮಗೆ ಗೊತ್ತಿಲ್ಲವೋ?

ಚಂ,—ನನಗೆ ಗೊತ್ತಿರೋದಿರಲ್ರಿ, ನೀವ ಮೆಂಬರಾಗಿ ಹೋಗಿದ್ದವರು ಏನು ಹೇಳುತ್ತಿರೋ ಅಂತ ಕೇಳಿದೆ.

ಕಾ,—ಸುಮ್ಮನೆ ನಮಗೆ ಅಪಮಾನ ಮಾಡೋಕೆ ಇನ್ನ ಕೇಳ್ತೀರಿ ಅಂತ ಕಾಣುತ್ತೆ.

ಚಂ,—ಅಪಮಾನ ಅಂತ ಈವತ್ತು ಗೊತ್ತಾಯ್ತೇನೋ. ಪತ್ರಿಕೆಗಳನ್ನೆಲ್ಲಾ ಬಿಚ್ಚಿ ತಾವು ಬಿಚ್ಚಿಸಿಕ್ಕೊಂಡು ಅಲ್ಲಿ ಮೊಲು ಹೊತ್ತುಕೊಂಡು ಹೇಗೆ ಕೂತಿದ್ದರೋ. ಮೆಂಬರು ಅಂದರೆ ಭೂಸ ಹಾಗಿರಬೇಕು, ನರಸಿಂಗರಾಯರಂತೆ. ಅನ್ನೋದನ್ನೆಲ್ಲಾ ಅನ್ನಿಸಿಕ್ಕೊಂಡು ಅಲ್ಲಿ ಕೂತಿರೋದೆ. ಯಾಕೆ ರಾಜೀನಾಮೆ ಕೊಟ್ಟು ಬಾರಬಾರದು?

ಕಾ;—ನೀವೆಲ್ಲಾ ಈಗಿನ ಕಾಲದ ಸುಡುಗರನ್ನ ನಾನಿನ್ನತ್ತು ಮೂವತ್ತು ವರ್ಷದಿಂದ ಮೆಂಬರಾಗಿದ್ದೆ. ಆದರೆ ಈಸಲದಷ್ಟು ಯಾವಾಗಲೂ ನಾಚಿಕೆಗೆಟ್ಟಿರಲಿಲ್ಲ ನಾವೇನು ಮಾಡೋದು ಕಾಲ ಕೆಟ್ಟುಹೋಯ್ತು.

ಚಂ;—ಕಾಲಾ ಯಾತಕ್ಕೆ ಕೆಟ್ಟಿತು? ಬನಗಳಿಗೆ ಗಂಡಸ್ತನವಿಲ್ಲಾ. ಅನ್ಯಾಯವಾಗಿದವರನ್ನ ಅನ್ಯಾಯ ಮಾಡಿದಿರಿ ಅಂತ ಹೇಳೋ ಧೈರ್ಯ ಇಲ್ಲಾ. ತಾತಯ್ಯನವರು ಹೇಳೋ ಹಾಗೆ ಕಪಾಲಕ್ಕೂಡದ್ರೆ ಅಳೋದಕ್ಕೂ ನಿಮಗೆ ಧೈರ್ಯವಿಲ್ಲಾ. ನಿಮ್ಮಂತವರು ನುಂಬರಾಗಿಹೋಗಿ ಅಲ್ಲಿ ಮಾಡೋದೇನು? ಪತ್ರಿಕೆಗಳನ್ನೆಲ್ಲಾ ಅಸೆಂಬ್ಲಿಲಿ ವಾಚಮಗೋಚರವಾಗಿ ಅನ್ಯಾಯವಾಗಿ ಬಯ್ತಾರೆಂದ್ರೆ ನೀವೆಲ್ಲಾ ಬಳೆ ತೊಟ್ಟುಕೊಂಡವರ ಹಾಗೆ ನೋಡ್ತಾ ಕೂತಿರೋದೇನ್ರಯ್ಯಾ? ಯಾವನಾದರೂ ಬಿಬ್ಬನಾದರೂ ಎದ್ದು ಪತ್ರಿಕೆಗಳನ್ನು ಬಯ್ಯೋದು ಕೆಡ್ಡ ಅನ್ಯಾಯ. ಸರ್ಕಾರದವರು ಮಾಡಿರೋದರಲ್ಲಿ ಬಹಳ ತಪ್ಪಿಲ್ಲೆ. ಅಂದು ಒಬ್ಬ ನಾದರೂ ಎದ್ದು ಹೇಳಬಾರ್ದಾಗಿತ್ತೆ? ನೀವೆಲ್ಲಾ ಹೋಗಿರೋದ್ರಿಂದ ದೇಶದ ಸ್ಥಿತಿ ಹೀಗಾಯ್ತು.

ವಿವಿಧ ವಿಷಯ.

ಅಫಘಾನಸ್ಥಾನದ ನವಸುಧಾರಣೆಗಳು.

ಅಫಘಾನದ ಅಮೀರರಾದ ಅಮನುಲ್ಲಾ ದವರು ಕಳೆದ ತಿಂಗಳು ಅರಿಯಲ್ಲಿ ಅಫೀಸರರ ಸಭೆ ಕೂಡಿಸಿ, ತನ್ನ ರಾಜ್ಯದ ಸುಧಾರಣೆಯ ಸಲುವಾಗಿ ಮಾಡಬೇಕಾದ ವಿಷಯಗಳನ್ನು ನಿರ್ಣಯಿಸಿರುವರು. ಸೈನ್ಯಕ್ಕೆ ಬಂದು ಸ್ವತ್ಯೇಕ ಕೋಶಗೃಹ. ವಿದ್ಯಾರ್ಥಿಗಳು ತಮ್ಮ ವಿದ್ಯಾಭ್ಯಾಸವನ್ನು ಮುಗಿಸಿದ ತರುವಾಯ ಒಂದು ವರುಷ ಮಿಲಿಟರಿ ಶಿಕ್ಷಣೆಯನ್ನು ಹೊಂದಬೇಕು. ಯುದ್ಧದ ಸಮಯದಲ್ಲಿ ಅವರು ಎದುರಿಗೆ ಬರಬೇಕಾಗುವುದು. ಸ್ವದೇಶಿ ಮತ್ತು ವಿದೇಶಿ ಸೈನಿಕರಿಗೆ ಏಕರೀತಿ ಸಂಬಳವಿರಬೇಕು. ಎಣ್ಣೆ ಗಸಿಯ ಕೆಲಸ ಕಲಿಯುವದಕ್ಕಾಗಿ ೧೫೦ ಹುಡುಗರನ್ನು ಬಾಕು ಎಂಬಲ್ಲಿಗೂ, ಕಾರ್ಖಾನೆಗಳಲ್ಲಿ ಕೆಲಸ ಮಾಡುವ ಸಲುವಾಗಿ ಕೆಲವು ಸಾವಿರ ಯುವಕರನ್ನು ಇಂಗ್ಲಾಂಡಿಗೂ ಕಳುಹಿಸಿಕೊಡಬೇಕು. ವಿದೇಶಗಳೊಂದಿಗೆ ಟೆಲಿಗ್ರಾಫ್ ಪ್ರಾರಂಭಿಸಬೇಕು. ಟೆಲಿಗ್ರಾಫಿಗಾಗಿ ಮಂತ್ರ ರಂಭಗಳನ್ನು ಉಪಯೋಗಿಸಬೇಕು. ನಟ್ಟಿಗೆಗಳು ವಾರ್ತಾ ಶಿಕ್ಷಣಾಯನ್ನು ಕೈಕೊಳ್ಳಲೇಬೇಕು. ಔದ್ಯೋಗಿಕ ಶಾಲೆಗಳನ್ನೂ, ವೈದ್ಯಶಾಲೆಗಳನ್ನೂ ಸ್ಥಾಪಿಸಿ, ಅವ್ಗಳಲ್ಲಿ ಪರ್ಷಿಯಾ ಭಾಷೆಯನ್ನು ಮುಖ್ಯ ಭಾಷೆಯನ್ನಾಗಿ ಮಾಡಬೇಕು. ಅಲ್ಲಿ ಪ್ರಥಮ ಚಿಕಿತ್ಸೆಯ ಪಾಠಗಳನ್ನು ಕಲಿಸಬೇಕು. ರಾಜಕೀಯ ವಿಷಯಗಳನ್ನು ಕಲಿಸುವ ಶಾಲೆಯನ್ನು ತೆಗೆಯಬೇಕು. ಈಗಿನ ಪೋಲೀಸ್ ಕೆಂಪು ಟೋಪಿಗೆಯನ್ನು ತೆಗೆದುಹಾಕಿ ಹೊಸರೀತಿಯ ಟೊಪ್ಪಿಗೆಯನ್ನು ಇವುಗೆ ಬದಲಾಗಿಸಬೇಕು. ಮುನಿಸಿಪಾಲಿಟಿಗಳಲ್ಲಿರುವ ಅಧಿಕೃತ ಹುದ್ದೇದಾರರನ್ನು ತಾನು ಸ್ವತಃ ವಿಚಾರಿಸಿ, ಅವರನ್ನು ಕೆಲಸವಿಂದ ನಿವೃತ್ತಪಡಿಸುವ ಕೆಲಸವನ್ನು ಅಮೀರರು ಸ್ವತಃ ಮಾಡಿಕೊಂಡಿರುವರು.

ತೋಳದಂತೆ ಗೊಡಿನಲ್ಲಿ ಸಾಕಬೇಕಾದ ಒಂದು ಸರುಲಕ್ಷಣದ ಕ್ರೂರ ಬಾಲಕೆಯೊಬ್ಬಳು ಲಂಡನ ಬಳಿ ಏಲೆನಪನ್ನು ನಡ್ಲಿರುವಳು.

ಕಾ;—ಏನಪ್ಪಾ ನಿಮಗೆ ಹೇಳೋದು ಈಸಾರಿ ಏಗಳನ್ನು ಹೊಳೆಯಲ್ಲಿ ಹಾಕಿದ್ದರು. ಈ ವಿಚಾರವು ಮಾಲೀಕರಿಂದ ರಿಪೋರ್ಟು ಮಾಡಲ್ಪಟ್ಟು ಪೋಲೀಸಿನಲ್ಲಿ ತನಿಖೆ ನಡಯುತ್ತಿತ್ತು. ಈಗ ಕೃತ್ಯವನ್ನು ನಡಿಸಿದನರು ಪತ್ತೆಯಾಗಿಯುವುದಾಗಿಯೂ ಪೋಲೀಸಿಸರು ಈ ಕೇಸನ್ನು ಪ್ಯಾಚಿಸ್ಟ್ರೇಟ್ ಕೋರ್ಟಿಗೆ ದಾಖಲ್ಮಾಡಿರುವುದಾಗಿಯೂ ಕೇಳುತ್ತೇನೆ. ಘನಹೊಂದಿದ ಸರ್ಕಾರದವರು ಕೃತ್ಯವನ್ನು ನಡಿಸಿದನರಿಗೆ ಒಂದೂಬನ್ನು ಮಾಡಿ, ಇನ್ನು ಮುಂದಾದರೂ ಈ ಗ್ರಾಮದಲ್ಲಿ ಇಂತಹ ದ್ವೇಷಗಳಿಗೂ ಅಸಭ್ಯಗಳಿಗೂ ಅವಕಾಶವಿಲ್ಲದಂತೆ ಮಾಡಿ ನೆಮ್ಮದಿಯನ್ನು ಏರ್ಪಡಿಸಿರುತ್ತಾರೆಂದು ನಂಬಿದ್ದೇನೆ.

ವಕಮತ್ಯಾಭಿಲಾಷಿ.

ಅಮೇರಿಕದ ನ್ಯೂಯೋರ್ಕಿನ ಒಂದು ಮಂದಿರದ ಗೋಡೆಗೆ ಮಹಡಿಯ ಮೇಲೆ ನಿಹರಿಸುವ ಮಾತೆಯೊಬ್ಬಳು, ತನ್ನ ದೊಂದು ಮಗುವನ್ನು ಮೇಲ್ಮಾಳಿಗೆಯ ಗೋಡೆಯ ಮೇಲೆ ಕುಳ್ಳಿರಿಸಿದಳು; ಬಳಿಯಲ್ಲಿದ್ದ ಮತ್ತೊಂದು ಮಗುವು ತಾನೂ ಆ ಗೋಡೆಯ ಮೇಲೇರಿ ಕುಳ್ಳಿರಲು ತಾಯನ್ನು ಹೀಡಿಸುವಾಗ, ತಾಯಿ ಆದನ್ನೆತ್ತಿ ಮೇಲೆ ಕುಳ್ಳಿರಿಸುವಾಗ ಎರಡೂ ಮಕ್ಕಳು ಕೆಳಗೆ ಜಾರಿಬಿದ್ದು ಕೂಡಲೆ ಮಡಿದವು. ತಾಯಿ ಅಲ್ಲೇ ಮೂರ್ಛೆಹೊಂದಿದಳು.

ಇಂಗ್ಲೆಂಡಿನ ಡೈಲಿ ಹೆರಲ್ಡ್ ಪತ್ರಿಕೆಯು ನಾವ್ಯಾಜ್ಯವಾಲಿಗಳಿಗೆ ವಿರುದ್ಧವಾದುದೆಂದು, ಅದರ ಸಹಾಯಕ್ಕಾಗಿ ಮೌಲಾನಾ ಮಹಮ್ಮದ ಆಲಿಯವರು ೧೫೦೦ ಪವನುಗಳನ್ನು ವಿಲಾಪತ್ ಧನದಿಂದ ಸಹಾಯ ಮಾಡಿದರೂ, ಸೈಮನ ಸಹ್ತಕರಲ್ಲೊಬ್ಬರಾದ ಕೂಲೀಪಕ್ಷದ ಮೇಜರ್ ಎಟ್ಲೀಯವರ ದರ್ಶನವನ್ನು ನಿಷೇಧಿಸಲು ಒಂದು ಸಭೆಗೂಡುವುದೆಂಬ ನೋಟೀಸನ್ನು ಸಹ ಆ ಪತ್ರವು ಪ್ರಕಟಿಸಲಿಲ್ಲದುದಿಂದ ಈಗ ೧೫೦೦ ಪವನುಗಳನ್ನು ಪುನಃ ಕೊಡಬೇಕೆಂದು ಮೌಲಾನಾರು ಕೇಳಿರುವರು.

ನೋಸಲೆಯಲ್ಲಿ ಮುಸಲ್ಮಾನರ ಹಾವಳಿ

ಸ್ವಾಮಿ:—

ನೋಸಲೆ ಗ್ರಾಮದಲ್ಲಿ ಒಹಳ ಕಾಲದಿಂದಲೂ, ಗಾಣಿಗರಿಬ್ಬರಿಗೂ ಮುಸಲ್ಮಾನರಿಗೂ ಕಾರಣಾಂತರದಿಂದ ಸ್ವಲ್ಪ ಮನಸ್ತಾಪವಿದ್ದು ಈಚೆಗೆ ಸುಮಾರು ೩-೪ ತಿಂಗಳಿಂದಲೂ ಆ ದ್ವೇಷವು ಪ್ರಬಲಿಸಿತು. ತಾಲ್ಲೂಕ್ ಅಧಿಕಾರಿಗಳು ಸೌಜನ್ಯವನ್ನುಂಟುಮಾಡಬೇಕೆಂದು ಬಹಳ ಪ್ರಯತ್ನಗಳನ್ನು ನಡೆಸುತ್ತಿದ್ದರು. ಹೀಗಿರುವಲ್ಲಿ ನೆನ್ನೆ ಆಕ್ಟೋಬರ್. 31 ನೇ ದಾರೀವಿನ ದಿವ್ಸ ಪೈಸೂರಿಗೆ ಬಿಟ್ಟದ ಜಾತ್ರೆಗಾಗಿ ಹೊಗಿದ್ದ ಕೆಲವು ಗಾಣಿಗರು ವಾಪಸು ಊರಿಗೆ ಹೋಗುತ್ತಾ, ಗಾಡಿಗಳನ್ನು ಹೊಳೆ ಕರೆಯಲ್ಲಿ ಬಿಟ್ಟು, ಎತ್ತುಗಳನ್ನು ಊರಿಗೆ ಸಾಗಿಸಿಕೊಂಡು ಹೋಗಿರಲು ರಾತ್ರಿ ಕೆಲವು ಮುಸಲ್ಮಾನರು 5, 6 ಗಾಡಿಗಳನ್ನು ಗರಗಸದಿಂದ ಕೊಯ್ದು ಬೆಂಕಿಹಾಕಿ ಸುಟ್ಟು ಕಬ್ಬಿಣದ ಸಾಮಾನು ಗಳನ್ನು ಹೊಳೆಯಲ್ಲಿ ಹಾಕಿದ್ದರು. ಈ ವಿಚಾರವು ಮಾಲೀಕರಿಂದ ರಿಪೋರ್ಟು ಮಾಡಲ್ಪಟ್ಟು ಪೋಲೀಸಿನಲ್ಲಿ ತನಿಖೆ ನಡಯುತ್ತಿತ್ತು. ಈಗ ಕೃತ್ಯವನ್ನು ನಡಿಸಿದನರು ಪತ್ತೆಯಾಗಿಯುವುದಾಗಿಯೂ ಪೋಲೀಸಿಸರು ಈ ಕೇಸನ್ನು ಪ್ಯಾಚಿಸ್ಟ್ರೇಟ್ ಕೋರ್ಟಿಗೆ ದಾಖಲ್ಮಾಡಿರುವುದಾಗಿಯೂ ಕೇಳುತ್ತೇನೆ. ಘನಹೊಂದಿದ ಸರ್ಕಾರದವರು ಕೃತ್ಯವನ್ನು ನಡಿಸಿದನರಿಗೆ ಒಂದೂಬನ್ನು ಮಾಡಿ, ಇನ್ನು ಮುಂದಾದರೂ ಈ ಗ್ರಾಮದಲ್ಲಿ ಇಂತಹ ದ್ವೇಷಗಳಿಗೂ ಅಸಭ್ಯಗಳಿಗೂ ಅವಕಾಶವಿಲ್ಲದಂತೆ ಮಾಡಿ ನೆಮ್ಮದಿಯನ್ನು ಏರ್ಪಡಿಸಿರುತ್ತಾರೆಂದು ನಂಬಿದ್ದೇನೆ.

ವಕಮತ್ಯಾಭಿಲಾಷಿ.

(ಇಷ್ಟು ಹೊತ್ತಿಗೆ ರಾತ್ರಿ 9 ಘಂಟೆ ಆದ್ದರಿಂದ ಇಬ್ಬರೂ ಸಾರ್ಕನ್ನು ಬಿಟ್ಟು ತೆರಳಿದರು.)

TAI NADU
10—11—1928

ಪಾದ್ರೀ ಪತ್ರಿಕೆಯ ಕುಚೇಷ್ಟೆ.

ಈ ತಿಂಗಳು ೮ ನೇ ತಾರೀಖಿನ ವೈತ್ತಾಂತ ಪತ್ರಿಕೆಯ ಸಂಪಾದಕೀಯ ಪುಟದಲ್ಲಿ ಈಜಿಪ್ಟ್ ದೇಶದ ಮೂಸ ಪತ್ರಿಕೆಗಳ ವಿಷಯವಾಗಿ ಒಂದು ಲೇಖನವು ಇರುವುದು. ಆ ಲೇಖನಕ್ಕೆ ಏಗ ಕಾರಣವೇನಿರುವುದೋ ನಮಗೆ ಗೊತ್ತಿಲ್ಲ. ಈಜಿಪ್ಟು ಸರ್ಕಾರದವರ ಆ ದೇಶದ ಕೆಲವು ವರ್ತಮಾನ ಪತ್ರಿಕೆಗಳ ವಿಷಯದಲ್ಲಿ ವರ್ತಿಸಿರುವಂತೆಯೇ ನಮ್ಮ ಮೈಸೂರು ಸರ್ಕಾರದವರೂ ಇಲ್ಲಿನ ಪತ್ರಿಕೆಗಳೊಡನೆ ವರ್ತಿಸಬೇಕೆಂಬುದು ಈ ವಾದ್ರೀ ಪತ್ರಿಕೆಯ ಸಲಹೆಯೋ ಏನೋ ಗೊತ್ತಿಲ್ಲ. ಈಜಿಪ್ಟ್ ದೇಶದ ಸ್ಥಿತಿಗೂ ನಮ್ಮ ಸಂಸ್ಥಾನದ ಸ್ಥಿತಿಗೂ ಬಹಳ ವ್ಯತ್ಯಾಸವಿರುವುದು. ಈಜಿಪ್ಟಿನಲ್ಲಿ ಪತ್ರಿಕೆಗಳು ಬರಕೀಯರ ರಾಜಕೀಯ ವಿಷಯಗಳಲ್ಲಿ ತಮ್ಮ ಸ್ವತಂತ್ರವನ್ನು ತಪ್ಪಿಸಿಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತಿರುವುವು. ನಮ್ಮ ಮೈಸೂರಿನಲ್ಲಿರುವುದು ಸರಕೀಯ ಸರ್ಕಾರವಲ್ಲ. ಪ್ರೇಮಮೂರ್ತಿ ಮಹಾರಾಜ ಸರ್ಕಾರ ಆನಂದದಿಂದ ಈಜಿಪ್ಟ್ ಸರ್ಕಾರದ ಕ್ರಮವನ್ನು ಮೈಸೂರಿನಲ್ಲಿ ಅನುಸರಿಸುವುದು ಅನುಚಿತ. ಬ್ರಿಟಿಷ್ ಇಂಡಿಯಾ ಸರ್ಕಾರದವರು ಕೂಡಾ ಪತ್ರಿಕೆಗಳು ಏನೇ ವಿರೋಧವಾಗಿ ಬರೆದರೂ, ಪತ್ರಿಕಾ ಕಾನೂನಿನಿಂದ ಅವುಗಳನ್ನು ನಿಲ್ಲಿಸುವುದಿಲ್ಲ. ಕೋರ್ಟಿನಲ್ಲಿ ಭಿನ್ನಾರ್ಜಿ ಸಲ್ಲಿಸಿ ತಪ್ಪಿತಸ್ಥರೆಂದು ಕಂಡುಬಂದ ಮೇಲೆ ಪತ್ರಿಕೆಗಳನ್ನು ನಿಷ್ಕ್ರಿಸುತ್ತಾರೆ. ಪಾದ್ರೀ ಪತ್ರಿಕೆಯು ಬರೆಯುವುದನ್ನು ನೋಡಿ'

"ವರ್ತಮಾನ ಪತ್ರಿಕೆಗಳಿಗೆ ಸಂಬಂಧಪಟ್ಟ ಒಂದು ಕಾನೂನು ರಚಿಸಲ್ಪಡಲು ಬಾಕಿಗೆ ಬಂದಿರುತ್ತದೆ. ವಿರೋಧಪಕ್ಷದ ನಾಯಕರೂ ಇದಕ್ಕೆ ಬಹಿರಂಗವಾಗಿ ಒಪ್ಪಿರುತ್ತಾರೆ. ಈ ಕಾನೂನಿನ ಮೇರೆಗೆ ಗೌರ್ನಮೆಂಟಿನವರು ನಮ್ಮ ವಿರುದ್ಧ ಭಂಗವನ್ನುಂಟುಮಾಡುವ ವರ್ತಮಾನ ಪತ್ರಿಕೆಗಳ ಮೇಲೆ ಕೋರ್ಟಿನಲ್ಲಿ ದಾವಾಮಾಡಬಹುದು, ತಪ್ಪಿತಸ್ಥರೆಂದು ಅಂಥ ವರ್ತಮಾನ ಪತ್ರಿಕೆಗಳನ್ನು ನಿಷ್ಕ್ರಿಸಿಬಿಡಬಹುದು. ಈ ಗುರಿಯಲ್ಲಿ ವಿಚಾರವನ್ನು ಕೋರ್ಟಿಗೆ ಹಾಕುವುದೇನೂ ಅಷ್ಟು ಫಲಕಾರಿಯಲ್ಲವೆಂಬುದು ಅಭಿಪ್ರಸ ಗೌರ್ನಮೆಂಟಿನವರಿಗೆ ಅನುಭವಪೂರ್ವಕವಾಗಿ ಕೆಲವಾಗಿ ಇರುವಂತೆ ತೋರುತ್ತದೆ. ಕೆಲವು ಸಂದರ್ಭದಲ್ಲಿ ಜೂರ್ಟಿನವರು ನಿಷ್ಕ್ರಿಯವಾತಿಗಳನ್ನು ಮಾಡುವುದಿಲ್ಲ. ಇದೂ ಅಲ್ಲದೆ ಇಂಥ ವಿಚಾರಣೆಗಳು ಸಮಯಕ್ಕೆ ಸರಿಯಾಗಿ ಗೊತ್ಯವೆತ್ತಿಸಿದ ಪತ್ರಿಕೆಯ ಪ್ರಕಟ ಅಧಿಕಾರಿಗಳು ಆ ಕೇಸನ್ನು ಕೈಗೆದುಕೊಂಡು ಅದು ಸ್ವತಂತ್ರವಾಗಿ ಕೋರ್ಟಿನಲ್ಲೇ ದೀರ್ಘಕಾಲ ನಡೆಯುವಂತೆ ಕಾಗದಗಳು ರಚಿಸಿಕೊಡುತ್ತಾ, ಆ ಕಾಲದಲ್ಲಿ ಗೌರ್ನಮೆಂಟಿಗೆ ವಿರೋಧವಾಗಿ ದೀರ್ಘವಾದ ಭಾಷಣಗಳನ್ನು ಮಾಡುತ್ತಾ ಬರುವರು. ಇಂಥ ಭಾಷಣಗಳು ಎಲ್ಲಾ ವರ್ತಮಾನ ಪತ್ರಿಕೆಗಳಲ್ಲೂ ಪ್ರಕಟವಾಗಲ್ಪಡುವುದು ಕಡೆಗೆ ಇದರ ಪರಿಣಾಮವು ಮೊದಲಿಗಿಂತ ಕೇಡೇ ಆಗುವುದು. ಈ ಕಾರಣದಿಂದ ಈಜಿಪ್ಟು ಗೌರ್ನಮೆಂಟಿನವರು ತಮ್ಮ ಅಧಿಕಾರವನ್ನು ಚಲಾಯಿಸಿ ನಮ್ಮರಿಗೆ ಭಂಗವನ್ನುಂಟುಮಾಡುವ ವರ್ತಮಾನ ಪತ್ರಿಕೆಗಳನ್ನು ನಿಲ್ಲಿಸಿಬಿಡುವುದೇ ವಿವೇಕವೆಂದು ಮುಂದುಟ್ಟು ಮಾಡಿಕೊಂಡು ಅದರಂತೆ ಅವ್ಯಾಹತವಾಗಿ ತಾತ್ಕಾಲಿಕ ತಾತ್ಕಾಲಿಕ.

ಬ್ರಿಟಿಷ್ ಜನಗಳ ಪ್ರಜಾ ಸ್ವಾತಂತ್ರ್ಯ ಧರ್ಮಗಳನ್ನು ಜೋಪಾನ ಮಾಡುವುದಕ್ಕೆ ಬದಲಾಗಿ ಪ್ರಜಾಸ್ವಾತಂತ್ರ್ಯಕ್ಕೆ ಕುಠಾರ ಪ್ರಾಯವಾದ ವರ್ತಮಾನ ಪತ್ರಿಕೆಗಳ ಕಾನೂನನ್ನು ಸಮರ್ಥಿಸುವ ಸಾಹಸವನ್ನು ಕೊನುವುದು ಪಾದ್ರಿಗಳ ಹೊಲಕ್ಕೆ ಅವಮಾನಕರವು. ಪಾದ್ರೀ ಪತ್ರಿಕೆಯು ಪುರುಳಿಲ್ಲದ ಈ ಪ್ರಲೋಭದ ಮಾತುಗಳನ್ನು ಸತಕ್ಕೆ ಪ್ರಚಲಿಸುವುದೋ ನಮಗೆ ಗೊತ್ತಿಲ್ಲ

ಲಿಖಿತ ವಾಙ್ಮೂಲಗಳು.

ಸರ್. ಎಂ. ವಿಶ್ವೇಶ್ವರಯ್ಯನವರು ಕಮಿಟಿಯ ಕಾರ್ಯ ಕಲಾಪಗಳನ್ನು ಮುಂಗಿಸುವುದಕ್ಕೆ ಪೂರ್ವಾಭಾವಯಾಗಿ ಕೊಟ್ಟ ಭಾಷಣದಲ್ಲಿ, ಒಕ್ಕಲು ಓದಿದ ದಾಖ್ಯಲೆಗಳಿಗೆ ಅಷ್ಟು ಬೆಲೆಯನ್ನು ಕೊಡುವುದಿಲ್ಲವೆಂದೂ, ತಾವಾಗಿ ಪ್ರಶ್ನೆಮಾಡಿ ಒಂದು ಉತ್ತರಗಳಿಗೆ ಮಾತ್ರ ಬೆಲೆಯನ್ನು ಕೊಡುವುದಾಗಿಯೂ ಹೇಳಿದರು. ಒಂದು ವಾಙ್ಮೂಲಗಳಲ್ಲಿ ಇದ್ದ ನ್ಯೂನತೆಗಳು ಯಾವುವು ಎಂಬುದು ಗೊತ್ತಿಲ್ಲ. ಅವುಗಳನ್ನು ಪೂರ್ತಿಯಾಗಿ ನಿರಾಕರಣೆ ಮಾಡುವುದು ಉಚಿತವೆಂದು ಹೇಳುವುದಕ್ಕಾಗುವುದಿಲ್ಲ. ಲಿಖಿತ ವಾಙ್ಮೂಲಗಳು ಬಹಳ ಜೋಡಣೆ ಮಾಡಿ ಸಮಂಜಸವಾಗಿ ಬರೆಯಲ್ಪಟ್ಟಿರುವುವು. ಅವುಗಳಲ್ಲಿ ಬಹಳ ಬೆಲೆಯಾದ ವಿಷಯಗಳಿರುವುವು. ಋಜುವಾತಿಗೆ ಒದಗಿ, ಸಮಂಜಸವಾಗಿದ ಭಾಗಗಳನ್ನು ನಿರಾಕರಿಸುವುದರಲ್ಲಿ ಅರ್ಥವೇನಿಲ್ಲ. ತಾವು ಕೇಳಿದ ಪ್ರಶ್ನೆಗಳಿಗೇ ಒಂದು ಉತ್ತರಗಳಿಗೆ ಪ್ರಾಧಾನ್ಯ ಕೊಡುವವೆಂದು ಕಮಿಟಿಯವರು ಮೊದಲೇ ಹೇಳಿದ್ದರೆ ಸಾಕ್ಷಿಗಳು ಅದಕ್ಕೇ ಸಿದ್ಧವಾಗಿ ಬರುತ್ತಿದ್ದರು. ಸಾಕ್ಷಿಗಳೆಲ್ಲಾ ಮುಗಿದ ಮೇಲೆ ಈಗ ಲಿಖಿತ ವಾಙ್ಮೂಲಗಳಿಗೆ ತಾವು ಪ್ರಾಧಾನ್ಯವನ್ನು ಕೊಡುವುದಿಲ್ಲವೆಂದು ಹೇಳುವುದು ನ್ಯಾಯವಲ್ಲ. ಕಮಿಟಿಯವರು ಪುನಃ ಆಲೋಚನೆಮಾಡಿ ಲಿಖಿತ ವಾಙ್ಮೂಲಗಳಿಗೆ ಅವುಗಳಿಗೆ ಸಲ್ಲುವ ಬೆಲೆಯನ್ನು ಕೊಡುವರೆಂದು ಸಂಬುತ್ತೇವೆ.

ದೇಶೀಯ ಸಂಸ್ಥಾನಗಳ ಪರಿಷತ್ತು

ದಕ್ಷಿಣ ದೇಶೀಯ ಸಂಸ್ಥಾನಗಳ ಪ್ರಜೆಗಳ ಒಂದು ಮಹಾಸಭೆಯು ನವೆಂಬರ್ ೧೧ ನುತ್ತು ೧೩ನೆಯ ತಾರೀಖುಗಳಲ್ಲಿ ತಿರುವಾಂಕೂರಿನಲ್ಲಿ ತಿರುವನಂತಪುರದಲ್ಲಿ ನಡೆಯಲಿರುವುದು. ದಕ್ಷಿಣದೇಶದ ಎಲ್ಲಾ ದೇಶೀಯ ಸಂಸ್ಥಾನಗಳ ಪ್ರಜಾಪುಂಜಿಂದರೂ ಮಹಾಸಭೆಯಲ್ಲಿ ಭಾಗಿಗಳಾಗುವ ಸಂಭವವಿರುವುದು. ನೆರೂರೂ ಕಮಿಟಿಯ ವರದಿ, ಬಟ್ಲರ್ ಕಮಿಟಿಯವರ ಸುತ್ತು ಸೈಮನ್ ಕಮಿಷನ್ ಇವುಗಳ ಪರಾಕಾಷ್ಠೆಯಾಗಿ ಭರತಖಂಡದ ರಾಜ್ಯಾಡಳಿತದಲ್ಲಿ ಕೆಲವು ಮಾರ್ಪಾಡುಗಳಾಗುವಷ್ಟೆ; ಆಗ

ಕೈಗೆ ಬಂದದ್ದು ಬಾಯಿಗೆ ಇಲ್ಲ.

ಸೈಮನ್ ಕಮಿಷನ್ ಸದಸ್ಯರು ಪೂನಾಪಟ್ಟಣದಲ್ಲಿದ್ದಾಗ ಅವರನ್ನು ಉಪಾಹಾರಾದಿಗಳಿಂದ ಸತ್ಕರಿಸುವುದಕ್ಕೋಸ್ಕರ ಪೂರ್ಣ ಒತ್ತಡ್ಡೂರ್ ವಿ|| ಜಾಮಹಮದ್ ಎಂಬ ಮತಸ್ಥರೊಬ್ಬರು ಪೂನಾಪಟ್ಟಣದ ಎಂಪ್ರೆಸ್ ಗಾರ್ಡನ್ ಎಂಬ ಉದ್ಯಾನವನದಲ್ಲಿ ಒಂದು ದೊಡ್ಡ ಮಂಟಪವನ್ನು ಕಟ್ಟಿಸಿ ಸುಮಾರು ಎರಡು ಸಾವಿರ ರೂಪಾಯಿಗಳನ್ನು ಖರ್ಚುಮಾಡಿ ನಾನಾ ವಿಧವಾದ ಭಕ್ಷ್ಯಭೋಜ್ಯಗಳನ್ನೂ ಆಸನಗಳನ್ನೂ ಏರ್ಪಡಿಸಿದ್ದರು. ಸಕಲವಾದ್ಯ ವೈಭವದೊಡನೆ ಅತಿಥಿಗಳು ಮಂಟಪವನ್ನು ಪ್ರವೇಶಿಸಿದಕೂಡಲೆ ಗುಡಿಗುಮಿಂಡು ಬರ್ರಗಾಳಿಗಳಿಂದೊಡಗೂಡಿದ ಪ್ರಚಂಡ ವರ್ಷವು ಸುರಿದು ಅತಿಥಿಗಳನ್ನೆಲ್ಲಾ ಸ್ನಾನಮಾಡಿಸಿಬಿಟ್ಟಿತು. ಕೂಡಲೆ ಅತಿಥಿಗಳು ದಿಕ್ಕುದಿಕ್ಕಿಗೆ ಓಡಲಾರಂಭಿಸಿದರು. ಸ್ವಲ್ಪಹೊತ್ತಿನಲ್ಲಿ ಮಂಟಪವು ಮುರಿದು ಬೆದ್ದು 3-4 ಜನರು ಅನಾಯಕ್ಕೆ ಗುರಿಯಾದರು.

ಭರತಖಂಡದ ರಾಜರು

ಭರತವರ್ಷದ ಮಹಾರಾಜರನ್ನು ಅವರ ಅಧಿಕಾರದಿಂದ ತಪ್ಪಿಸಿರುವ ಬಳಿಕ, ಸರ್ಕಾರವು ಅವರಿಗೆ ವೆನ್ಸನ್ನು ಕೊಡಲು ಏರ್ಪಾಡು ಮಾಡಿರುವುದು. 'ಪ್ರಜೆಗಳು ದುಃಖದಿಂದ ಕಂಗೆಟ್ಟು ಸಂಳುವಾಗ, ಅವರ ಸುಖವೃದ್ಧಿಗಾಗಿ ಸೇರುವ ಕಂದಾಯದಿಂದ ನನಗೇನೂ ವೆನ್ಸನು ತೆಂಬೇಕಾಗಿಲ್ಲ. ನಾನೇ ದುಡಿದು ಜೀವಿಸುವೆನು. ನನ್ನ ಪ್ರಜೆಗಳೇ ನೀರಿ, ಸ್ವೇಚ್ಛೆಯಿಂದ ನನಗೆ ಹಣಕಿರಲೊಪ್ಪಿದರೆ ಮಾತ್ರ ಸ್ವೀಕರಿಸುವೆನು.' ಎಂದು ಮಹಾರಾಜರೆನ್ನುವರು. ಮಹಾರಾಜರು ಪದಚ್ಯುತರಾದರೂ ವೆನ್ಸನು ಅಂಗೀಕರಿಸುವುದಕ್ಕಿಂತಲೂ ಗೌರವಪ್ರದವಾಗಿಲ್ಲ. ಅವರ ರಾಜ್ಯದಲ್ಲಿ ಊಟಕ್ಕಿಲ್ಲದೆ ಸಾವಿರಾರು ಜನರು ನರಳುವಾಗ, ಸ್ವಕಷ್ಟದಿಂದ ಅವರೂ ಜೀವಿಸಿ ಗೌರವವನ್ನು ಕಾಪಾಡಿಕೊಳ್ಳುವೆನೆಂದು ಅವರು ಹೇಳಿ. ವಿಲಾಯತೀ ಭೂಮಾಣಿಯಿಂದ ಒಡ ಪ್ರಜೆಗಳ ಹಣವನ್ನು ಧ್ವಂಸಮಾಡುವ ಇತರ ಜಮೀನಾರ್ದಾರರಿಗೆ ಮಾರ್ಗದರ್ಶಕರಾಗಿರುವರು. ಇತ್ತ ಸಫಲ ಮಹಾರಾಜರು ವೆನ್ಸನ್ನು ಸರ್ಕಾರವು ೨೨ ೦೦೦ ದಿಂದ ೫೪೦೦ ಕ್ಕೆ ಇಳಿಸಿರುವುದೆಂದೂ ತಿಳಿದುಬಂದಿದೆ. ಇವೂ ಅದನ್ನು ತಿರಸ್ಕರಿಸಿದ್ದರೆ ಲೇಸಾಗುತ್ತಿತ್ತು. ಯಾವನೊಬ್ಬ ಬ್ರಾಹ್ಮಣನ ಪೂಜಾ ಧನವಾದ ದಸವನ್ನೊಬ್ಬನು ಅಪಹರಿಸಿ, ಅದನ್ನು ಕೊಂದು, ಅಪಹರ್ತನಿಂದ ಪಾಪೋಪಸನ್ನು ತಮಾಸಿ ಅದನ್ನೇ ಬ್ರಾಹ್ಮಣನಿಗೆ ದಾನವನ್ನು ಕೊಡಲು ಮುಂದೆ ಬಂದಿದ್ದ ಹಿಂದೂಣಕಥೆಯು ನೆನಪಾಗುತ್ತದೆ —ಶಂತಿಕುಟೀರ

ಬ್ರಿಟೀಷ್ ಇಂಡಿಯಾಕ್ಕೂ ದೇಶೀಯ ಸಂಸ್ಥಾನಗಳಿಗೂ ಇರಬೇಕಾದ ಸಂಬಂಧವನ್ನು ಕುರಿತು ಚರ್ಚಿಸುವುದೇ ಮಹಾಸಭೆಯ ಉದ್ದೇಶ. ತಿರುವಾಂಕೂರ್ ಲೆಜಿಸ್ಲೇಟಿವ್ ಕೌನ್ಸಿಲಿನ ಮೆಂಬರಾದ ಮ|| ಪಿ ಕೆ. ನಾರಾಯಣಪಿಳ್ಳೆಯವರು ಸ್ವಾಗತಸಮಿತಿಯ ಅಧ್ಯಕ್ಷರಾಗಿ ಚುನಾಯಿಸಲ್ಪಟ್ಟಿರುವರು. ಸಭೆಗೆ ಸರ್ ಎಂ. ವಿಶ್ವೇಶ್ವರಯ್ಯನವರು ಅಧ್ಯಕ್ಷರಾಗಲು ಸಮ್ಮತಿಸಿರುತ್ತಾರೆಂದು ವರ್ತಮಾನ.

Regd. No. M. 2322 || ವಂದೇಮಾತರಂ || ಬಿಡಿ ಪ್ರತಿಗೆ೨ ಪೈ.

ತಾಯಿನಾಡು

ಪ್ರತಿ ದಿನವೂ ಮೈಸೂರಿನಲ್ಲಿ ಪ್ರಕಟವಾಗುವುದು

ಸಂವಾದಕ-
ಪಿ. ಆರ್ ರಾಮಯ್ಯ

ಸುಖ ದುಃಖೇ ಸಮೇಕೃತ್ವಾ ಲಾಭಾಲಾಭೌ ಜಯಾಜಯೌ |
ತತೋ ಯುದ್ಧಾಯ ಯುಜ್ಯಸ್ವ ನೈವಂ ಪಾಪಮವಾಪ್ಸ್ಯಸಿ || ಗೀತಾ ||

ವಾರ್ಷಿಕ ಚಂದಾ { ಸ್ಥಳಕ್ಕೆ ೫೦-೦ ಪಂಸ್ಥಳಕ್ಕೆ ೧೦೦-೦

ಸಂಪುಟ ೧] ಶನಿವಾರ ೧೦ ನವಂಬರ್ ೧೯೨೮ [ಸಂಚಿಕೆ ೩೯

ನಿಮ್ಮ ಆರೋಗ್ಯದ ಮಾರ್ಗವು ಅಮೃತಾಂಜನದಲ್ಲಿರುವುದು

ಎಲ್ಲಾ ರೋಗಗಳೂ ಅಮೃತಾಂಜನದಿಂದ ಗುಣವಾಗುತ್ತಿರುವುದು

ತಲೆನೋವು ಕೆಮ್ಮು
ವಾತಕೂಲೆ ನೆಗಡಿ
ಬೆನ್ನು ನೋವು ಸುಟ್ಟ ಘಾಯ
ಕಟಿಕೂಲೆ ಹುಣ್ಣುಗಳು
ನಾಸ್ಯರ್ವಾಯು ಉಳುಕಿದ ನೋವು

ಅಮೃತಾಂಜನ ಡಿಪೋ

ಮದರಾಸು. ಬೊಂಬಾಯಿ.

ರಹ ! ಹ!! ಸುಖವೇ ಸುಖ !!!

ನಮಗೆ ಟಾನಿಕ್ ಬೇಕಾಗಿದೆಯೋ ? ಹಾಗಾದರೆ ಲೋಕಪ್ರಸಿದ್ಧವಾಗಿರುವ

ಆತಂಕನಿಗ್ರಹ ಮಾತ್ರೆಗಳನ್ನೇ

ಉಪಯೋಗಿಸಿ

ವಿಶಕ್ಕೆಂದರೆ ಇವೇ ಈಗಿನ ಟಾನಿಕ್‌ಗಳೆಲ್ಲಾ ಉತ್ತಮವಾದವು. ಕ್ರಯ ಡಬ್ಬಿ 1 ಕ್ಕೆ 1-0-0

ಈ ವಿಜಿನ್ಸುಗಳಲ್ಲಿ ನಮ್ಮ ಔಷಧಗಳು ದೊರೆಯುತ್ತವೆ: ಆತಂಕ ನಿಗ್ರಹ ಔಷಧಾಲಯ
ಮೈಸೂರು, ಶಿವಮೊಗ್ಗ, ದಾವಣಗೆರೆ, ಶಿವಮೊಗ್ಗ, ಹಾಸನ, ಚಿತ್ರದುರ್ಗ ಚಿಕ್ಕಪೇಟೆ, ಬೆಂಗಳೂರು ಸಿಟಿ

ಪೆಕ್ಕಳ ಆರೋಗ್ಯವೇ ತಂದೆತಾಯಿಗಳ ಭಾಗ್ಯವಲ್ಲವೆ?

ಈ ಎರಡು ಕುಟುಂಬರತ್ನಗಳನ್ನು ಸನ್ನೋಪದಲ್ಲಿರಿಸಿಕೊಂಡಿರಿ.
ಸಿದ್ಧ ವೈದ್ಯಸೋಪಾದಿಯಲ್ಲಿ ಸಮಸ್ತ ರೋಗಗಳನ್ನು ಪರಿಹರಿಸುತ್ತದೆ.

ಬಾಲಸಂಜೀವಿನಿ:—ಮಕ್ಕಳಿಗೆ ೧-೨ ವೇಳೆ ಸುಖವಾಗಿ ಭೇದಿಮಾಡಿಸಿ ಸಮಸ್ತ ವಿಧ ಜ್ವರ, ಅಜೀರ್ಣ ವಾಯುಗ
ನ್ನು ಪರಿಹರಿಸುತ್ತದೆ. 50 ಮಾತ್ರೆ 4 ಆಣೆ

ಶ್ರೀಕರ ಕಸ್ತೂರಿಮಾತ್ರೆ:—ಪ್ರಪಂಚದ ಸುವಾಸನೆಯುಳ್ಳ ಈ ಮಾತ್ರೆಗಳನ್ನು ತಾಂಬೂಲದೊಡನೆ ಸೇವಿ
ಸಲೆಲ್ಲಾ ಪವಾಗಳನ್ನೂ ಎಲ್ಲಾ ದೇಶಗಳಲ್ಲಿ ಕಂಡಿರುವ ಅರೋಗ್ಯವನ್ನು ಕಾಪಾಡುತ್ತದೆ. ಮಕ್ಕಳ ಮತ್ತು ದೊಡ್ಡವರ
ಮ್ಮು, ನೆಗಡಿ, ಜ್ವರ, ಹಲ್ಲುನೋವು ಕೀಲವಾಯು, ಪ್ಲೆಗು ಇನ್ಫ್ಲುಯೆನ್ಸ, ಕಾಲಾ ಮು ಕಾಲ್ಪಸ ಖಾತರಿ ಗುಣಪಡಿ
ಸುತ್ತದೆ ಶ್ರೀಕರ ಕಸ್ತೂರಿಮಾತ್ರೆಗಳಿಲ್ಲದ ಅಕ್ಕವಕ್ಕಳ ಇರಬೇಕಾಪದ್ದು ಬೆಲೆ ೧೫ ಕ್ಕೆ 4 ಆಣೆ

ಔಷಧಾಲಯಕ್ಕೆ ಅನುಕೂಲವಾದ ಕೈಲ ಸರಬುಪ್ಪು, ಲೇಪಗಳು ಸಿದ್ಧವಾಗಿವೆ.

ಆಯುರ್ವೇದ ವಿದ್ವಾ ಭಿಷಗ್ರತ್ನ ಬಿ. ವಿ. ಪಂಡಿತರು,
ಸಿದ್ಧೌಷಧಿಕಾಲಾ, ನಂಜನಗೂಡು.

ಪ್ರಾಣನಂಜೀವನ ಲೋಹ್ಯ.

ಧಾತುಸ್ರಾವ, ಅಜೀರ್ಣ, ಸೂತಿಕಾವಾತ, ಮೇಹವಾಯು, ಗರ್ಭವಾತ, ಸ್ತ್ರೀರೋಗ ಮೊದಲಾದ ರೋಗಗಳನ್ನು ಗುಣಮಾಡುವುದು ಧಾತುವೃದ್ಧಿಯನ್ನುಂಟುಮಾಡುವುದು

ಕ್ರಯ ಸಾದಾ ಪೀಠಿಗೆ 4-0-0, ಸ್ಪೆಷಲ್ 1 ಪೀಠಿಗೆ 8-0-0

ನಮ್ಮ ವಿಳಾಸ:—
ಪಂಡಿತ ಮುದ್ದಲಾ ರಾಮಚಂದ್ರಾಚಾರ್ಯ,
ಆಯುರ್ವೇದಾಶಯ ಬ್ಯಾಂಚ್, ಮೈಸೂರು.

ಸಿಟಿ ಕೋಆಪರೇಟಿವ್ ಬ್ಯಾಂಕ್

ಮೈಸೂರು ಸಿಟಿ ಕೋಆಪರೇಟಿವ್ ಬ್ಯಾಂಕಿನ ಅಷ್ಟಾರ್ಡ್ ಜನರಲ್ ಮೀಟಿಂಗು ಈ ಮಾಹೆ 11 ನೇ ಭಾನುವಾರ ಮಧ್ಯಾಹ್ನ 3 ಘಂಟೆಗೆ ಸರಿಯಾಗಿ ಮೈಸೂರು ಲ್ಯಾನ್ಸ್‌ಡೌನ್ ಬಜಾರ್ ಮೇಲ್ಕಟ್ಟಡದಲ್ಲಿರುವ ತಾರದಾವಿಲಾಸ ಮೈಸ್ಕೂಲಿನಲ್ಲಿ ನಡೆಯುತ್ತದೆ ಯಾದ್ದರಿಂದ ಮೇಂಬರುಗಳೆಲ್ಲರೂ ಕಾಲಕ್ಕೆ ಸರಿಯಾಗಿ ಸದರಿ ಸ್ಥಳಕ್ಕೆ ದಯಮಾಡಿಸಬೇಕಾಗಿ ಕೋರಿದೆ.

Y. Chandrasekhara Sastry
Honorary Secretary,
C. C. Bank Ltd.
Mysore.

ತಾಯಿನಾಡು.

(ಪ್ರಜಾಹಿತವನ್ನು ಪ್ರತಿಪಾದಿಸುವ ಪತ್ರಿಕೆ)

ವಂದೇಮಾತರಂ ಲಾಡ್ಜ್ ಮೈಸೂರು.

ತಾಯಿನಾಡು

TAI NADU (Daily Edition.)

The Leading Nationalist Daily of Mysore.

ಎಂ.ಎನ್. ಸಿದ್ದಪ್ಪ & ಬ್ರದರ್ಸ್.

ಹಾರ್ಡ್‌ವೇರ್ ಮರ್ಚೆಂಟ್ಸ್ & ಜನರಲ್ ಆರ್ಡರ್ ಸಪ್ಲೈಯರ್ಸ್,

ಎಂ. ಎನ್. ಸಿದ್ದಪ್ಪ ಬ್ರದರ್ಸ್‌ರವರು ಉತ್ತಮ ವಾದ ಹಾರ್ಡ್‌ವೇರ್ ಸಾಮಾನುಗಳನ್ನು ಸಗಟು ಮತ್ತು ಚಿಲ್ಲರೆ ವ್ಯಾಪಾರಕ್ಕೆ ಇಟ್ಟುಕೊಂಡಿದ್ದಾರೆ. ಇದಲ್ಲದೆ ಸರ್ಕಾರದವರಿಗೂ ಮತ್ತು ಇತರ ಯಾವುದೇ ಸಂಸ್ಥೆಗಳಿಗೂ ಬೇಕಾದಷ್ಟು ಸಾಮಾನುಗಳನ್ನು ಪೂರೈಸುವರು. ಜನರಲ್ ಆರ್ಡರ್ ಸಪ್ಲೈಯರ್ಸ್ ಆಗಿಯೂ ಇವರು ಕೆಲಸ ಮಾಡುತ್ತಾರೆ. ಇವರ ಅನುಕೂಲಕ್ಕಾಗಿ ಪೆಟ್ಟಿ 1 ಕ್ಕೆ 0—8—0 ಮೇರೆ ಬೆಲೆಗಳ ಇಟ್ಟಿದ್ದಾರೆ. ನಮ್ಮ ಹೊಸ ವಿಲಾಸಗಳ ಲಿಸ್ಟ್‌ಗಳ ಮೊದಲು ಪೋಸ್ಟಾಲ್ ನಮ್ಮೆರೆ ಪತ್ರವ್ಯವಹಾರ ಮಾಡಿದಲ್ಲಿ ಕಳುಹಿಸಲಾಗುವುದು.

ಎಂ. ಎನ್. ಸಿದ್ದಪ್ಪ ಬ್ರದರ್ಸ್, ಹಾರ್ಡ್‌ವೇರ್ ವ್ಯಾಪಾರಿಗಳು, ಮೈಸೂರು.

"ಫಿಷಗೃಹ್ಣ"

ಪಾಳ್ಕೆದ ವೆಂಕಟಾಚಾರಲಪಂಡಿತರ
ಆಯುರ್ವೇದೀಯ ಸಿದ್ಧೌಷಧಿಗಳು

ಬಂದ ಬಳಿಕ ಪೇಚಾಡುವುದಕ್ಕಿಂತ ಕೊಂಡಿದ್ದು ಬಾರದಂತೆ ತಡೆಯಿಸಿಕೊಳ್ಳುವ ಸಪ್ರೋತ್ಸಾಹವಾದ ಉಪಾಯವನ್ನು ಲೋಕಾಮಯಹರ ಕಸ್ತೂರಿ ಮಾತ್ರೆಗಳಿಂದು ನಿಮ್ಮ ಸೇವಿಸಿಲ್ಲಿರಲಿ.

ಶ್ರೀ ದಿನ ಕಾಲಾಂತರವಾಗಲಿ. ಹಾಗೇ ಆಗದೆ ೧—೨ ನ್ನು ಸಂವತ್ಸರವಿದ್ದರೆಬೇಕಾಕಿಯನ್ನು ಕಜ್ಜಿಕಾಗಾಳಿ ಮುಖ ಸಂಬಂಧ ಕಾಯಿಲೆಯನ್ನು ಅನುಗೊಡದೆ ಕಾಪಾಡುವುದು.

ಮಕ್ಕಳ ಎಲುವು, ನೆಗಡಿ, ಕೆಮ್ಮುಲು, ಸೀತವಾತ ಜ್ವರ, ಚರ್ಮದ ಅಲರ್ಜಿಯ ಬೇಧಿ, ಅಗ್ನಿಮಾಂದ್ಯ, ಕೆಮ್ಮಿಯುಸ್ಸಿರ ನಾಂದ್ಯ, ಕೆಲಸ ಸ್ಪೃಹ, ಇಂಫ್ಲುಯೆಂಜ, ರಕ್ತಹೀನತೆ, ಮುಟ್ಟಿನ ತೊಂದರೆಯನ್ನು, ಪೆಡ್ಡವರಗ್ಗುನ, ಚಳ್ಳಾಟ, ಕೆಮ್ಮಲು ತಾಲು, ನೆಗಡಿ, ಅಜೀರ್ಣದ ಪೆಟ್ಟಿನೋವು, ಸೀತವಾತಕಂದ ಸಂಮಗಾಯಿಂದ ಪಾಲಾದ್ದ ಹುಬ್ಬಿದಿಂದ ಬಳಿ, ಬಂಪೀನತೆ ಇವ್ಕ ಅನೇಕ ರೋಗಗಳನ್ನು ಗುಣಪಡಿಸುವುದೆ

ಜಾಣಾಂತಿಯರಿಗೆ ಕಸ್ತೂರಿಗೆ ಬದಲಾಗಿ ಈ ಮಾತ್ರೆಗಳು ಸಂಜೀವನ. ವ್ಯಾಯಾಮದಿಂದ ಮೈಮುಲವಕಾರವನ್ನಿದ್ದವರಿಗೂ ಗೋಷಾಸ್ತ್ರೀಯರಿಗೂ ಅತ್ಯೋಗ್ಯವರ್ಧನಕಾರಿ.

250 ರಿಂದ 300 ಮಾತ್ರೆಗಳವರೆಗಿರುವ ಸೀಸೆ 1 ಕ್ಕೆ 0—4—0 ಮೇರೆ ಅಂಚೆ ಖರ್ಚಿನಿಂದಲೂ ದೊರೆಯುತ್ತವೆ. ಟೊನಾಲಾ ಬಿರ್ಡ್ ಸೀರಿ 1 ಸೀಸೆಗೆ 8 ಆಣೆ, 6 ಕ್ಕೆ 1—0—0 ರೂಪಾಯಿ. 12 ಕ್ಕೆ 2—13—0 ರೂಪಾಯಿ 25 ಕ್ಕೆ 5—3—0.

ಶ್ರೀ ಸೀತಾರಾಮಪ್ಪಯ್ಯನವರ ಶಾಲಾ,
ಬ್ಯಾಂಕಾಕ್ಷೀಪುರ
ಚಿಕ್ಕನೇಜೆ ಬೆಂಗಳೂರು ಸಿಟಿ.

ಫಿಷಗಾರತ್ನ
ಪಾಳ್ಕೆದ ವೆಂಕಟಾಚಲಪಂಡಿತರ,
ಶ್ರೀ ಸೀತಾರಾಮಪುರವೈದ್ಯಶಾಲಾ.
ಹೆದ್ದಾಳೀಪುರ ಮೈಸೂರು.

Our Agents

Copies of Tai Nadu, Daily and Weekly are available for sale at the following places —

1 N. P Venkatappa & Co
Excelsior Type-writing Institute, Balepet, Bangalore City
2 Koppedi Ramakrishniah, Agent, Hassan.
3 Siddiah, Sri Nanjundeswara Bank Ltd Nanjangud.
4 M. N. S. & Sons, Lansdowne Buildings, Mysore.
5 B V Pundit & Co, Lakshmivilas Road, Mysore.
6 Friends' Union, Mysore.
7 Green Mart, Lansdowne Buildings, Mysore.



For High Class Jewellery, Silver Ware and other presentation novelties, please consult and buy from

Sri Lakshmi Venkateswara & Co
Manufacturing Jewellers, Nagarthpet,
Bangaloie City.

WANTED.

Wanted Candidates for Telegraph and Station Master's Classes. Full particulars and Railway Fare Certificate on 2 annas stamp.

Apply to:—
Imperial Telegraph College,
Nai Sarak, Delh

To Let

Printed and published by P. R. Ramaiya
Sri Rama Press, D. Subbiah Road, Mysore

ತಾಯಿನಾಡು
9—11—1928

ಪತ್ರಿಕೆಗಳ ಬಹಿಷ್ಕಾರ

ಒಂದು ಸಂವಾದ

(ಒಂದು ಸ್ಕೂಲಿನಲ್ಲಿ ನಡೆದದ್ದು.)

ವಿದ್ಯಾರ್ಥಿ; ಸಾರ್, ನಮ್ಮ ಸ್ಕೂಲಿಗೆ ತಾಯಿನಾ , ವಿಶ್ವಕರ್ಣಾಟಕ, ಏರಕೇನು ಸಾಸದಸ್ಯರುಮು ಪತ್ರಿಕೆಗಳನ್ನ ತರಿಸಕೂಡದೆಂದು ಸರ್ಕ್ಯೂಲರು ಅಪ್ಪ ಮಾಡಿದಾರಮೆ ? ಹಾಗೆಂದ್ರ ನಾನು ವೀರಕೇನು ಲ್ಲಿ ಓದಿದೆ. ನಿಜವೇ ಸಾರ ?

ಉಪಾಧ್ಯಾಯರು,— ಅದೆಲ್ಲ ನಿನಗ್ಯಾಕಯ್ಯ ?

ವಿ,— ಏನ್ಸಾರ್ ರೀಡಿಂಗ್ ರೂಮಿಗೆ ನಮ್ಮ ಲಿ ನೀವು ದುಡ್ಡು ವಸೂಲ್ ಮಾಡುವುದಿಲ್ಲವೇ ?

ಉ;—(ಸ್ವಗತ) ಏನಪ್ಪಾ ಮಾಡೋದು ಇದಕ್ಕೆ, ಪೀಕಲಾಟಕ್ಕೆ ? ಆಲಾಬಯವರ ಸರ್ಕ್ಯುಲರ್ ಅನ್ನ ತ್ಯವಾಗಿ, ಎಂದು ಕಳುಹಿಸುವರು ಆದರೆ ಅದೆಲ್ಲಾ ಹಿಂದಂಗನೇ ಆಗಿಹೋಯಿತಲ್ಲಾ.

ವಿ;— ಏನ್ಸಾರ್ ನಮ್ಮನ್ನ ಇದ್ದೀರಿ ಪೀಸ್ ಮಾ ನಾವು ಕೊಡಬೇಕು. ಪೇಪರನ್ನ ಏತಕ್ಕು ತರಿಸಕೂ ಮು ಎಂದು ನಾವು ಕೇಳೋದಿಕ್ಕಿಲ್ಲವೊ, ಇದು ಒಳ್ಳೆ ್ಯದು ಸಾರ್ ?

ಉ;—ನಾನೇನಪ್ಪ ಮೊಡಲಿ ನಾನು ಸರ್ಕಾರಿ ನಾ ಸರ್ಕಾರವರು ಹೇಳಿದಾಗೆ ಕೇಳಬೇಕು, ನೀನು ಳಿದ್ದು ನಿಮ್ಮ ಇಲಾಖೆಯವರು ಆ ಪೇಪರುಗಳನ್ನು ಸಕೂಡದೆಂದು ಒರೆದಿದ್ದಾರೆ.

ವಿ,— ಕಾರಣವೇನ ಸಾರ್ ?

ಉ— ಆ ಪತ್ರಿಕೆಗಳನ್ನು ನೋದಿದರೆ ಹುಡುಗರ ನಸ್ಸು ಕೆಟ್ಟು ಹೋಗುತ್ತದೆಯಂತೆ.

ವಿ,— ಮನಸ್ಸು ಕೆದುವುದೆಂದರೇನ ಸಾರ್.

ಉ;— ವಿದ್ಯಾರ್ಥಿಗಳು ದಂಗೇ ಕೋರರಾಗುವರೆಂ ಅವರ ಅಭಿಪ್ರಾಯವಿರುವ ಹಾಗೆ ಕಾಣುತ್ತೆ.

ವಿ,— ಏನ್ಸಾರ್ ನೀವು ಸ್ಕೂಲಿಗೆ ತರಿಸದೇ ೋದರೆ ನಾವು ಪಬ್ಲಿಕ್ ರೀಡಿಂಗ್ ರೂಮಿನಲ್ಲಿ ಓದಿ ಳ್ಳುತ್ತೇವೆ. ನಮ್ಮ ಮನೆಗೆ ತರಿಸಿಕೊಳ್ಳುತ್ತೇವೆ. ರಿ ಸಾರ್. ನಮ್ಮದುನ್ನು ಈಸ್‌ಕೊಂಡು ನಮಗೆ ೀಕಾದ ಪತ್ರಿಕೆ ತರಿಸದೇ ೋದರೆ ನಾವು ನಿಮಗೆ ಡಿಂಗ್ ರೂಮ್ ಫೀಸ್ ಕೊಡಬೇಕು ಬೇಡವೊ ?

ಉ,—ಮೇಲಕ್ಕೂ ಕೆಳಕ್ಕೂ ನೋಡುತ್ತಾರೆ

ವಿ— ನಾವು ವಿದ್ಯಾರ್ಥಿಗಳೆಲ್ಲಾ ಒಂದು ವಿಾಟಿಂ ಮಾಡಿ ತೀರ್ಮಾನ ಮಾಡಿಕೊಳ್ಳುತ್ತೇವೆ. ನಿಮಗೆ ಡಿಂಗ್ ರೂಮ್ ಫೀಸ್ ಕೊಡಬೇಕೊ ಬೇಡವೊ ೀಳ್ತೀವಿನ.

ಉ;—(ಸ್ವಗತ) ಏನೋ ಮಾಡೋದು ಹೋಗ ವಿ ನೋ ಮಾಡಿದ ಹಾಗಾಯಿತು. ನಮಗೇನು ? ಮಾಡಿದ ವರು ಅನುಭವಿಸಲಿ.

ವಿ;— ಇದು ಪಕ್ಷಪಾತವಲ್ಲವೆ ಸಾರ್, ಸ್ಟಾರ್ ಆ ಳಕಾಲಾ, ಕುರುಬರ ಪತ್ರಿಕೆ, ಒಕ್ಕಲಿಗರ ಪತ್ರಿಕೆ, ಇ ಪುಗಳನ್ನೆಲ್ಲಾ ತರಿಸಬಹುದೋ ಆ ಪತ್ರಿಕೆಗಳೇನು ಸ ರ್ಕಾರದ ಮೊಮ್ಮಕ್ಕಳೇನು.

ಉ,— (ನಗುವನ್ನು ತಡೆಯುವರು),

ವಿ;— ಏನ್ ಸಾರ್ ನೀವು ಸುಮ್ಮನೆ ಇದ್ದೀರಿ.

ಉ;— (ಸ್ವಗತ) ಸಾಕಪ್ಪ ಈ ಸ್ಕೂಲು ಮೇಸ್ಟರ ಕೆಲಸ, ಈ ಗೊಲಾಮು ಚಾಕರಿ.

ಬೆಂಗಳೂರಿನಲ್ಲಿ ನಾರ್ಮಲ್ ಸ್ಕೂಲಿನಿಂದ ಡಿಸ್ಮಿಸ್ ಆದ ಉಪಾಧ್ಯಾಯರೇ ಧನ್ಯರು, ಅವರು ಧನ್ಯರು. ಅವ ರು ಸ್ವತಂತ್ರರಾದರು.

ವಿ.—(ಸ್ವಗತ) ಈ ವೇಷ್ಟ್ರು ಏನೂ ಹೇಳೂದಿಲ್ಲ. ಅವರಿಗೆ ಡಿಸ್ಮಿಸ್ ಆಗುತ್ತದೆ ಎಂದು ಭಯವೇನೊ, (ಪೋ ಷ್ಟ್ರಿಗೆ, ಕೈಮುಗಿದು ಹೋಗಿಬರುತ್ತೇನೆ ಸಾರ್ ಈ ವ ಪಯವನ್ನು ನನ್ನ ಕ್ಲಾಸ್ ಹುಡುಗನ ಕೂಡ ತಿಳಿ ಮಾಡುತ್ತೇನೆ.

ಉ;— ಒಳ್ಳೇದು ಹೋಗಿಬಾಪ್ಪ.

ವರ್ತಮಾನ ಸಂಗ್ರಹ

ಆ ಜ್ಞಾ ಸ್ ಟ್ಯಾನರ ಮೊ ಏದ್ದ ಮೆ

ಚೀಫ್‌ಕೋರ್ಟಿನಲ್ಲಿ ಅಡ್ವಾ ಟ್ಜಾನರನ್ನು ನೇಮಕ ವಿಷಯವಾಗಿ ವಿಚಾರಿಸಕೂಡದೆಂದು ತೀರ್ಮಾನ ವಾಯಿತಷ್ಟೆ, ಆದರೆ ಪುನಃ ಎಲ್. ಎ. ರಾಮಾಯ ಪುಲ್ ಬೆಂಚಿಗೆ ಅರ್ಜಿಲ್ ಮಾಡಿರುವರೆಂದು ಕೇಳು ತ್ತೇನೆ.

ವಿಶ್ವೇಶ್ವರಯ್ಯ ಕಮಿಟಿ

ವಿಶ್ವೇಶ್ವರಯ್ಯ ಕಮಿಟಿಯವರು ತಾ|| ೨೦-೧೦-೨೮ ರಲ್ಲಿ ತಮ್ಮ ವಿಚಾರಣೆಯನ್ನು ಮುಕ್ತಾಯಮಾ ಡಿದರು. ಆವತ್ತಿನ ದಿವಸ ಸಾಕ್ಷಿ ಕೊಟ್ಟವರು ಮ|| ಗಳಾದ ಎಸ್. ಎಸ್. ಸೆಟ್ಲೂರ್‌ರವರು ಮತ್ತು ಸಿ. ಹಯವದನರಾಯರವರು. ಮ|| ಹಯವದನರಾಯರು ನ ರ್ಕಾಮಾನಪತ್ರಿಕೆಗಳಿಗೆ ಸಂಪೂರ್ಣ ಸ್ವಾತಂತ್ರ್ಯವಿರಬೇ ಕೆಂದು ಸ್ಪಷ್ಟವಾಗಿ ತಿಳಿಸಿದರು.

ಕಳ್ಳತ್ತಿಯ ಕಾಂಗ್ರೆಸ್ಸು ಸರ್ವ ವಿಷಯಗಳಲ್ಲಿ ಯೂ ಮಹತ್ವವುಳ್ಳದ್ದಾಗಲು ಅಡ್ಡಿಯಿಲ್ಲ. ಈ ಸಲ ಹಿಂ ದೂ ದೇಶದ ಹೊಂಗಿರುವ, ನಮ್ಮ ವೀರಿಯರ ಆ ಕಾಂ ಕ್ಷೆಗಳಲ್ಲಿ ಸಹಾನು ಭೂತಿಯುಳ್ಳ, ಪಟೇಲ್‌ರಿಯರಿಸಿ ಅಂದರೆ ಲಂಗ್ಲ ಪಾರ್ಲಿಮೆಂಟಿನ ಕಲವು ಸದಸ್ಯರಿಗೆ ಮಾತ್ರವಲ್ಲ. ಚೈನ, ಐಗುಪ್ತ, ಅಲೇಣಿಯ, ಮೊದಲಾದ ಪ್ರದೇಶಗಳಲ್ಲಿಯು ಪ್ರಜಾಪಕ್ಷೀಯರಿಗೆ ಆಮಂತ್ರಣ ಹೋಗಿದೆ. ಇದು ಕಾಂಗ್ರೆಸ್ಸಿನ ಇತಿಹಾಸದಲ್ಲಿ ಅಭೂತ ಪೂರ್ವವಾದುದೇ ಸರಿ.

ದಾ ಪ್ಪ ನ ವರು ಮತ್ತು ಸ್ಟಾ ಗ್ ಪತ್ರಿಕೆ.

ವಿಶ್ವೇಶ್ವರಯ್ಯ ಕಮಿಟಿಯ ಮುಂದೆ ಜಸ್ಟಿಸ್ ಡಿ. ಕೆ. ರಾಮರಾಯರು ಎಚ್. ಸಿ. ದಾಸಪ್ಪನವರನ್ನು ಸ್ಟಾರ್‌ಪತ್ರಿಕೆಯ ವಿಷಯವಾಗಿ ಪ್ರಶ್ನೆಮಾಡಿದರು. ಪ್ರಶ್ನೆ:— ಪತ್ರಿಕೆಗಳ ವಿಷಯವೆತ್ತಿದಾಗ ನೀವು ಸ್ಟಾ ರನ್ನು ಏತಕ್ಕೆ ಬಟ್ಟುಬಿಟ್ಟಿರಿ. ನೀವು ನಿಷ್ಪಕ್ಷಪಾತವಾ ಗಿರಬೇಕು.

ಉತ್ತರ:— ನಾನು ಸ್ಟಾರನ್ನು ಓದುವುದೇ ಇಲ್ಲ. ನನಗೂ, ಅದಕ್ಕೂ ಸಂಬಂಧವೇ ಇಲ್ಲ.

ಹೆಣವನ್ನು ನೋಡಿದ್ದು

ಅಡ್ವೋಕೇಟುಗಳಾದ ಮ|| ರಾ|| ಎಂ. ಶ್ರೀನಿವಾ ಸರಾಯರೂ ಡಿ. ಶೇಷಾದ್ರಿ ಅಯ್ಯಂಗಾರ್ಯರವರೂ ಜು ಲೈ ೩೧ ನೇ ಪ್ರಾತಃಕಾಲ ಸುಬ್ರಹ್ಮಣ್ಯಪೇಟೆ ಸ್ಕೂಲು ಮುಂಭಾಗದಲ್ಲಿ ಒಂದು ಹಿಂದೂ ಹೆಣವನ್ನು ನೋಡಿ ದೆವಾಗಿಯೂ ಆ ವಿಷಯವನ್ನು ಪೋಲೀಸಿನವರಿಗೆ ರಿ ಪೋರ್ಟು ಮಾಡಿದ್ದಾಗಿಯೂ ವಿಶ್ವೇಶ್ವರಯ್ಯ ಕಮಿಟಿ ಯ ಮುಂದೆ ಸಾಕ್ಷ್ಯವನ್ನು ಹೇಳಿದರು.

ಎಲ್ಲಾ ಸುಳ್ಳು

ಮ|| ಜಿ. ನಾಗಪ್ಪನವರು ಎಲ್. ಎಸ್. ರಾಜುರ ಪ್ರಶ್ನೆಗೆ ಉತ್ತರವಾಗಿ ರಾಜುರವರು ಹೇಳಿದ್ದೆ ಲ್ಲಾ ಸುಳ್ಳು. ತನಗೂ ಅಬ್ಬಾಸ್‌ಖಾನರಿಗೂ ಭೇಟಿ ಯೇ ಇಲ್ಲ. ಮನಲತ್ತಿನ ಮಾತೇ ಇಲ್ಲ. ಕೆ. ಎಚ್. ರಾಮಯ್ಯನವರ ಮನೆಗೆ ಅವರ ಮನೆಯಲ್ಲಿ ಯಾರೋ ಖಾಯಿಲೆಯಾಗಿದ್ದುದರಿಂದ ಅವರ ಬೇಷಸ್ಥಿತಿಯನ್ನು ವಿಚಾರಿಸುವುದಕ್ಕೆ ಹೋದೆ ಎಂಬುದಾಗಿ ವಿಶ್ವೇಶ್ವರ ಯ್ಯ ಕಮಿಟಿಯ ಮುಂದೆ ಸ್ಟೇಟ್‌ಮೆಂಟನ್ನು ಓದಿದ ರು. ಮ|| ರಾ|| ಗಳಾದ ಅಬ್ಬಾಸ್‌ಖಾನರು, ಕೆ. ನಾ ರಾಯಣಸ್ವಾಮಿ ಅಯ್ಯರ್‌ಪಬ್ಲಿ ರಾಜುರವರು ಹೇಳಿ ನ್ನಲ್ಲಾ ಸೆಳ್ಳು ಎಂದು ವಿಶ್ವೇಶ್ವರಯ್ಯ ಕಮಿಟಿಯ ಮುಂದೆ ಕಾಗದವನ್ನು ಬರೆದರುವರು. ಎಲ್. ಎಸ್. ರಾಜುರವರು ಜಿ. ನಾಗಪ್ಪನವರಿಗೆ ಉತ್ತರವಾಗಿ ನನ್ನ ನ್ನು ನಾಗಪ್ಪನನೇ ನಾಟಿ ಸವಾಲು ಮಾಡಿದ್ದರೆ ಎ ಲ್ಲವೂ ಹೊರಬೀಳುತ್ತಿದ್ದವು. ಹಾಗೆ ಮಾಡದೆ ನನ್ನ ಹಿಂದೆ ಒಂದು ಹೇಳಿಕೆಯನ್ನು ಕೊಟ್ಟಿರುವುದು ವಿಷಾ ದಕರವಾಗಿದೆ ಎಂದು ಹೇಳಿದರು.

ಉಪನ್ಯಾಸ

ವೇದಮೂರ್ತಿ ಹೊಳವನಹಳ್ಳಿ ಶೇಷಾಚಾರ್ಯರವರು ಈ ತಿಂಗಳು ೮ ನೇ ತಾ|| ರಾಗಾಯ್ತು ಸಂಸ್ಕೃತ ಪಾಠಶಾಲೆಯಲ್ಲಿ ಭಗವದ್ಗೀತೆ ವಿಚಾರವಾಗಿ ನಾಲ್ಕು ಉಪನ್ಯಾಸಗಳನ್ನು ಮಾಡುವರು.

ಮೈಸೂರಿನ ಸೆನೇಟ್ ಮೀಟಿಂಗ್

ಮೈಸೂರು ವಿಶ್ವವಿದ್ಯಾನಿಲಯದ ಸೆನೆಟ್ ಮೀಟಿಂಗ್ ಈ ತಿಂಗಳು ೨೨ ನೇ ಪ್ರಾತಃಕಾಲ ೮॥ ಗಂಟೆಗೆ ಬೆಂಗಳೂರು ಸೆಂಟ್ರಲ್ ಕಾಲೇಜಿನಲ್ಲಿ ನಡೆಯುವುದು.

TAI NADU.

9—11—1928

ಪತ್ರಿಕೆಗಳ ಪ್ರತಿಜ್ಞೆ.

